ಮಾಡಬೇಕು. ನೀವು ಸಕ್ಕರೆಯನ್ನಾದರೂ ಮಾರಾಟ ಮಾಡಿ, ಫ್ಯಾಕ್ಟರಿಯನ್ನಾದರೂ ಮಾರಾಟ ಮಾಡಿ ನಮಗೆ ಇಷ್ಟು ದಿವಸದಲ್ಲಿ ಕೊಡುತ್ತೇವೆ ಎಂದು ಹೇಳಿ ಎಂದು ಕೇಳಿದರೆ ಹಾಗೆ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ರೈತರ ಬಗ್ಗೆ ತಾವು ಹೇಳಿದಿರಿ, ಸರ್ಕಾರಕ್ಕೂ ಅವರ ಬಗ್ಗೆ ಕಳಕಳಿಯಿದೆ. ನಾವು ಅವರ ಸಮಸ್ಯೆಯನ್ನು 15 ದಿವಸದಲ್ಲಿ ಮಾಡಬಹುದು ಅಥವಾ ಒಂದು ವಾರದಲ್ಲಿ ಮಾಡಬಹುದು. ಆದರೆ ಅದು ಆಗಬೇಕಲ್ಲ. ಈ ಸಮಸ್ಯೆಗಳು ಎಷ್ಟು ಎಂದು ಮಾನ್ಯ ಯಡಿಯೂರಪ್ಪನವರಿಗೂ ಗೊತ್ತಿದೆ. 3-4 ದಿವಸ ಅಥವಾ ಒಂದು ವಾರ ಎಂದು ಟೈಮ್ ಫಿಕ್ಸ್ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಅದನ್ನು ತಿಳಿದುಕೊಳ್ಳಬೇಕು. ತಿಂಗಳಿಗಿಂತ ಮೊದಲೇ ಆಗಬಹುದು. ಇನ್ನು ರೈತರಿಗೆ ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಅವರ ಸಮಸ್ಯೆಯನ್ನು ಬಗೆಹರಿಸುತ್ತೇವೆ, ಸತ್ಯಾಗ್ರಹವನ್ನು ಮಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ದ.ಅ. ಗಮನಸೆಳೆಯುವ ಸೂಚನೆಗಳು

1. ವಿಷಯ:ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಡಿದ ಮಲೇರಿಯಾ ರೋಗ.

ಶ್ರೀ ಬಿ.ದಾಮಾನಾಥ ರೈ (ಬಂಟ್ವಾಳ ಕ್ಷೇತ್ರ):- ಸನ್ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯ ರೋಗವು ವ್ಯಾಪಕವಾಗಿ ಹರಡಿ ಅನೇಕ ಸಾವುಗಳಿಗೂ ಕೂಡ ಕಾರಣವಾಗಿದೆ. ಜನರು ಈ ಬಗ್ಗೆ ಭಯಭೀತರಾಗಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಡಾ.ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆ ದಿನ ಶೂನ್ಯ ವೇಳೆಯಲ್ಲಿ ಈ ಪ್ರಶ್ನೆ ಬಂದಂಥ ಸಂದರ್ಭದಲ್ಲಿ ನಾನು ಈ ಸದನದಲ್ಲಿ ಇರಲಿಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ ಮೇಲ್ಮನೆಯಲ್ಲಿ ಪ್ರಶ್ನೆಗಳು ಇದ್ದುದರಿಂದ ಅಲ್ಲಿ ಇದ್ದೆ. ಅದಕ್ಕಾಗಿ ತಮ್ಮಲ್ಲಿ ವಿಷಾದವನ್ನು ವ್ಯಕ್ತಮಾಡುತ್ತಾ ಇವತ್ತು ಏನು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮಲೇರಿಯ ರೋಗದ ಹೆಚ್ಚಳಿಕೆ ಬಗ್ಗೆ ಸರ್ಕಾರದ ಗಮನವನ್ನು ಸನ್ಮಾನ್ಯ ಸದಸ್ಯರು ಏನು ಸೆಳೆಯುತ್ತಿದ್ದಾರೆ ಅದರ ಬಗ್ಗೆ ವಿವರವನ್ನು ನೀಡುತ್ತೇನೆ.

ಮಂಗಳೂರು ಮಹಾನಗರ ಪಾಲಿಕೆಯು ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1.1.95ರಿಂದ ಜುಲೈ 95 ರ ವರೆಗೆ ಒಟ್ಟು 3229 ಮಲೇರಿಯಾ ಪ್ರಕರಣಗಳು ವರದಿಯಾಗಿದ್ದು 3211 ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ನೀಡಲಾಗಿದೆ. ಇಲಾಖೆಯ ದಾಖಲಾತಿಗಳಂತೆ 4 ರೋಗಿಗಳು ಮಾತ್ರ ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿನ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಮರಣ ಹೊಂದಿರುವರೆಂದು ತಿಳಿದು ಬಂದಿರುತ್ತದೆ.

1.ಶ್ರೀ ಪ್ಲಾರ್ನೆನ್ಸ್ 92 ವರ್ಷ

2.ಶ್ರೀ ಶ್ಯಾಮದೇವಾಡಿಗ 52ವರ್ಷ

3.ಶ್ರೀ ಲಾಯನ್ಸ್ 52ವರ್ಷ

4.ಶ್ರೀ ಕೃಷ್ಣಪ್ಪ 35ವರ್ಷ

ಜಿಲ್ಲೆಗೆ ಮಲೇರಿಯಾ ನಿಯಂತ್ರಣ ಕಾರ್ಯಕ್ರಮಕ್ಕೆ ಮಲೇರಿಯಾ ನಿರೋಧಕ ಗುಳಿಗೆಗಳು ಕ್ಲೋರೋಕ್ವಿನ್: 3.44 ಲಕ್ಷ ಮಾತ್ರೆಗಳು, ಪ್ರಿಮಾಕ್ವಿನ್: 25,000 ಮಾತ್ರೆಗಳು ಗಾಜಿನ

ಹಲಗೆಗಳು: 5000, ಸ್ಪೂಜಿಗಳು: 3000, ಕೀಟನಾಶಕ ಪುಡಿ : ಡಿಡಿಟಿ-9 ಮೆಟ್ರಿಕ್ ಟನ್ ಪೂರೈಸಿದೆ ಹಾಗೂ ಮಹಾನಗರ ಪಾಲಿಕೆಯಲ್ಲಿ ಸೊಳ್ಳೆ ನಿಯಂತ್ರಣ ಕಾರ್ಯಕ್ರಮಕ್ಕೆ ಈಗಾಗಲೇ ಒಂದು ರಾಷ್ಟ್ರೀಯ ಫೈಲೇರಿಯಾ ನಿಯಂತ್ರಣ ಘಟಕವು ನಗರ ಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿದೆ. ಮಲೇರಿಯಾ ನಿಯಂತ್ರಣಕ್ಕಾಗಿ ಈ ಘಟಕದ ಚಟುವಟಿಕೆಗಳನ್ನು ತೀವ್ರಗೊಳಿಸಲಾಗಿದೆ. ಇದಕ್ಕೆ ಬೇಕಾಗುವ ಕೀಟನಾಶಕ, ದ್ರಾವಣಗಳಾದ ಬೇಟಕ್ಸ್ 600 ಲೀಟರು ಹಾಗೂ ಅಬೇಟ್ : 160 ಲೀಟರ್ ಸರಬರಾಜು ಮಾಡಲು ಭಾರತ ಸರ್ಕಾರದಿಂದ ವ್ಯವಸ್ಥೆ ಮಾಡಲಾಗಿದೆ.

ಒಳ ಚರಂಡಿ ಬಯಲು ರಸ್ತೆಗಳಲ್ಲಿ ಕೊಳಚೆ ನೀರು ಹರಿದು ಹೋಗುವುದು ಇವುಗಳನ್ನು ಸರಿಪಡಿಸಲು ನಗರ ಪಾಲಿಕೆಗೆ ಸಂಬಂಧಿಸಿರುತ್ತದೆ.

+ ಶ್ರೀ ಬಿ.ರಮಾನಂದ ರೈ :- ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ಒಂದು ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ರೋಗವು ವ್ಯಾಪಕವಾಗಿ ಹಬ್ಬಿ ಅನೇಕ ಸಾವುನೋವುಗಳಿಗೆ ಕಾರಣವಾಗಿ ಜನರು ಅದರಿಂದ ತೊಂದರೆಗೆ ಒಳಗಾದದ್ದು ನಮಗೆಲ್ಲ ತಿಳಿದಿರತಕ್ಕಂಥ ವಿಚಾರ. ಇರಾಡಿಕೇಶನ್ ಆಫ್ ಮಲೇರಿಯ ಈ ಕಾರ್ಯಕ್ರಮದ ಅಡಿಯಲ್ಲಿ ಮಲೇರಿಯ ರೋಗವನ್ನು ಮೂಲೋತ್ಪಾಟನೆ ಮಾಡತಕ್ಕಂಥ ಕಾರ್ಯ ನಡೆಯಿತು. ಒಂದು ಕಾಲದಲ್ಲಿ ಇದ್ದಂಥ ಮಲೇರಿಯ ರೋಗವನ್ನು ನಿಯಂತ್ರಣ ಮಾಡುವಲ್ಲಿ ನಮಗೆ ಯಶಸ್ಸು ದೊರಕಿದೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಜಿಲ್ಲೆಯ ನಗರಪ್ರದೇಶದ ಸುತ್ತಮುತ್ತಲಿನ ತಾಲ್ಲೂಕುಗಳಲ್ಲಿ ಪುನಃ ದೊಡ್ಡ ಪ್ರಮಾಣದಲ್ಲಿ ಮಲೇರಿಯ ರೋಗ ಕಾಣಿಸಿಕೊಂಡಿದೆ. ಇದು ಗಂಭೀರ ರೂಪವನ್ನು ತಾಳುತ್ತಿದೆ. ಸಚಿವರು ಈಗಾಗಲೇ ಇಲ್ಲಿ ಹೇಳಿಕೆ ಕೊಟ್ಟಿರುವ ಪ್ರಕಾರ 25 ಜನ ಮೃತಪಟ್ಟಿದ್ದಾರೆ ಮತ್ತು 4 ಜನ ಖಾಸಗಿ ನರ್ಸಿಂಗ್ ಹೋಂಗೆ ಸೇರಿದ್ದಾರೆ. ಈ ರೋಗ ಹರಡುವಿಕೆಯಿಂದ ಜನರು ಭಯಭೀತರಾಗಿದ್ದಾರೆ. ಈ ರೋಗವನ್ನು ನಿಯಂತ್ರಣ ಮಾಡಲು ಅತಿ ಪರಿಣಾಮಕಾರಿಯಾದಂಥ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಗಮನ ಹರಿಸಿಲ್ಲ ಎನ್ನುವಂಥ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ರಾಷ್ಟ್ರೀಯ ಮಲೇರಿಯ ನಿಯಂತ್ರಣ ಯೋಜನೆಯಡಿಯಲ್ಲಿ ಉಡುಪಿಯ ಸಂಸತ್ ಸದಸ್ಯರಾದಂಥ ಶ್ರೀ ಆಸ್ಕರ್ ಫರ್ನಾಂಡಿಸ್ ರವರು ಲೋಕಸಭೆಯಲ್ಲಿ ಪ್ರಶ್ನೆ ಎತ್ತಿದ ನಂತರ ಮತ್ತು ಅಲ್ಲಿಯ ಅವರ ವರಿಷ್ಠ ನಿಯೋಗ ಒಂದು ಜಿಲ್ಲೆಗೆ ಭೇಟಿಕೊಟ್ಟದೆ. ಪ್ರತಿಯೊಂದು ಭಾಗಕ್ಕೂ ಅವರು ಹೋಗಿ ಅಧ್ಯಯನ ಕೂಡ ಮಾಡಿದ್ದಾರೆ. ಇದರ ಹೊರತಾಗಿ ರಾಜ್ಯಸರ್ಕಾರ ಹೆಚ್ಚು ಗಂಭೀರವಾಗಿ ಈ ರೋಗ ಹರಡುವಿಕೆಯನ್ನು ತಡೆಗಟ್ಟಲು ಗಮನಹರಿಸಬೇಕಾಗಿದೆ. ಹಿಂದೆ ಮಲೇರಿಯ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ರೋಗವನ್ನು ನಿಯಂತ್ರಣ ಮಾಡಲು ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗುತ್ತಿತ್ತು. ಅದೇನೆಂದರೆ ಮನೆಮನೆಗೆ ಭೇಟಿ ಕೊಟ್ಟು ಅಕ್ಕಪಕ್ಕದಲ್ಲಿ ಇದ್ದಂತಹ ಕೊಳಚೆ ನೀರಿಗೆ ಮತ್ತು ತಟಸ್ಥವಾಗಿ ಇರುತ್ತಿದ್ದ ನೀರಿಗೆ ಮಲೇರಿಯ ನಿಯಂತ್ರಣ ರಸಾಯನಿಕವನ್ನು ಸಿಂಪರಣೆ ಮಾಡತಕ್ಕಂಥ ಕಾರ್ಯಕ್ರಮವನ್ನು ಈ ಯೋಜನೆಯ ಅಡಿಯಲ್ಲಿ ಕೈಗೊಳ್ಳಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಈ ರೀತಿಯ ರಸಾಯನಿಕ ಸಿಂಪರಣೆ ಕಾರ್ಯಕ್ರಮ ಕಾಣಸಿಗುವುದು ಬಹಳ ಅಪರೂಪವಾಗಿದೆ. ಇಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಮಲೇರಿಯ ರೋಗವು ನಮ್ಮ ಜಿಲ್ಲೆಯಲ್ಲಿ ಉಲ್ಬಣಾವಸ್ಥೆಗೆ ಬಂದಿರುವುದರಿಂದ, ಈಗಲಾದರೂ ಕೂಡ ಸರ್ಕಾರ ಈ ನಿಟ್ಟಿನಲ್ಲಿ

ಹೆಚ್ಚಿನ ಗಮನಹರಿಸಬೇಕು. ಇಲ್ಲದೆ ಹೋದರೆ ನಿಯಂತ್ರಣ ತಪ್ಪಿ ಇನ್ನೂ ಹೆಚ್ಚು ಸಾವುನೋವುಗಳು ಆಗುವಂಥ ಸಂದರ್ಭಗಳು ಬರಬಹುದು. ಈಗಲೂ ಹಳ್ಳಿಪ್ರದೇಶಗಳಲ್ಲಿ ರೋಗ ಲಕ್ಷಣಗಳು ಕಾಣುತ್ತಿದೆ. ಈಗಾಗಲೇ ನೀವು ಲೆಕ್ಕಾಚಾರ ಕೊಟ್ಟ ಪ್ರಕಾರ ಸಾಮಾನ್ಯ 3229 ಮಲೇರಿಯ ಪ್ರಕರಣಗಳು, ಸರ್ಕಾರಿ ಲೆಕ್ಕಾಚಾರದ ಪ್ರಕಾರ ಇಷ್ಟು ಪ್ರಕರಣಗಳನ್ನು ಕೊಟ್ಟಿದೆ.

ಅಧ್ಯಕ್ಷರು:- ಶ್ರೀ ರಮಾನಾಥ ರೈಯವರೆ, ನೀವು ತಿಳಿದುಕೊಳ್ಳುತ್ತೀರೆಂದು ನಾನು ಸುಮ್ಮನೆ ಇದ್ದೆ. ಈಗ ನಾನು ಹೇಳಲೇಬೇಕಾಗಿದೆ. ಗಮನ ಸೆಳೆಯುವ ಸೂಚನೆ ಅಂದರೆ, ನೀವು ವಿಷಯವನ್ನು ಪ್ರಸ್ತಾಪ ಮಾಡುತ್ತೀರಿ, ಮಂತ್ರಿಗಳು ಸರ್ಕಾರದ ಪರವಾಗಿ ಹೇಳಿಕೆಯನ್ನು ನಿಮ್ಮ ಮುಂದೆ ಓದಿ ಹೇಳುತ್ತಾರೆ. ಆ ಹೇಳಿಕೆ ಸಮರ್ಪಕವಾಗಿಲ್ಲದಿದ್ದರೆ, ಯಾವ ಅಂಶದ ಕಡೆಗೆ ಅವರ ಗಮನ ಸೆಳೆಯಬೇಕು, ಇಂತಹದ್ದು, ನಿಮ್ಮ ಗಮನಕ್ಕೆ ಬಂದಿಲ್ಲ, ಇಂತಹದ್ದು ನ್ಯೂನತೆಗಳು ಇವೆ ಎಂದು ನೀವು ಅವರಿಗೆ ತಿಳುವಳಿಕೆ ಕೊಡಬೇಕು. ಅದನ್ನು ಬಿಟ್ಟು ನೀವು ಭಾಷಣ ಮಾಡಿದರೆ ನಾನು ಏನು ಮಾಡಬೇಕು? ನೀವು ಮಿನಿಸ್ಟರ್ ಆಗಿದ್ದವರು. ಹೇಗೆ? ಶ್ರೀ ಯೋಗೇಶ್ ಭಟ್ಟರೋ ಮತ್ತೆ ಇನ್ನಾರೋ ಹೊಸಬರು ಪರವಾಯಿಲ್ಲ ಹೇಳಬಹುದು. ನೀವು ನನಗಿಂತ ಹಿರಿಯರು. ಬೇಗ ಮುಗಿಸಿ.

ಶ್ರೀ ಬಿ.ರಮಾನಾಥ ರೈ:- ಇಷ್ಟು ರೋಗ?

ಶ್ರೀ ವಾಟಾಳ್ ನಾಗರಾಜ್:- ಇಷ್ಟು ರೋಗ ಅಂದರು. ಎಷ್ಟು ರೋಗ ಅಂದೆ,

ಶ್ರೀ ಬಿ.ರಮಾನಾಥ್ ರೈ:- 3229 ಪ್ರಕರಣಗಳನ್ನು ಗುರುತಿಸಲಾಗಿದೆ. ಎನ್ನತಕ್ಕಂಥಹ ಮಾತನ್ನು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:-ಅಂದರೆ ರೋಗ 3229? ಸ್ವಲ್ಪ ಸ್ವಲ್ಪ ಯಾವುದು ಸ್ವಾಮಿ ಅದು?

ಅಧ್ಯಕ್ಷರು:- ಇಲ್ಲ, ಇಲ್ಲ. ಭಾಷೆ ಸ್ವಲ್ಪ ವ್ಯತ್ಯಾಸವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಾವು ಸುಮ್ಮನೆ ಕುಳಿತುಬಿಟ್ಟಿದ್ದೀರಿ. ರೋಗಗಳು ಯಾವ್ಯಾವು?

ಅಧ್ಯಕ್ಷರು:- ನೀವು ವಿವರಣೆಯನ್ನು ಬೇಗ ಕೇಳಿ.

ಶ್ರೀ ಬಿ.ರಮಾನಾಥ ರೈ :- ಸನ್ಮಾನ್ಯ ಸಚಿವರು ಇದರ ಬಗ್ಗೆ ಗಂಭೀರವಾಗಿ ಗಮನ ಹರಿಸಿಬೇಕಾಗಿದೆ. ನೀವು ಜಿಲ್ಲೆಗೆ ಭೇಟಿ ಕೊಟ್ಟು ಎಲ್ಲ ಅಧಿಕಾರಿಗಳನ್ನು ಕರೆಸಿ ವ್ಯಾಪಕವಾದ ಒಂದು ಕಾರ್ಯಕ್ರಮ ಹಾಕಿಕೊಂಡು ಮಲೇರಿಯಾ ನಿಯಂತ್ರಣ ಮಾಡತಕ್ಕ ಕೆಲಸಕ್ಕೆ ಹೆಚ್ಚು ಆದ್ಯತೆ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ.ಜಯರಾಮ ಶೆಟ್ಟಿ.:- ಸನ್ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 10- 15 ವರ್ಷಗಳ ಅವಧಿಯಲ್ಲಿ ಮಲೇರಿಯಾದ ಸೋಂಕೇ ಇರಲಿಲ್ಲ. ಕಳೆದ ವರ್ಷದಿಂದ ಮಲೇರಿಯಾ ರೋಗ ಹಬ್ಬಿದೆ . ಕಳೆದ ವರ್ಷ ಸುಮಾರು 20 ಜನ ಮೃತಪಟ್ಟಿದ್ದಾರೆ. ಈ ವರ್ಷ ಈಗಾಗಲೇ 25ಜನ ಮೃತಪಟ್ಟಿದ್ದಾರೆಂಬುದು ಸರ್ಕಾರದ ಅಂಕಿ ಅಂಶಗಳ ಪ್ರಕಾರ ತಿಳಿಯುತ್ತದೆ. ಸುಮಾರು 4 ಸಾವಿರ ಜನರಿಗೆ ಮಲೇರಿಯಾ ರೋಗ ಹಬ್ಬಿದೆ.

ಈಗಾಗಲೇ ಆರೋಗ್ಯ ಮಂತ್ರಿಗಳು ಹೇಳಿದ್ದಾರೆ, ಒಳಚರಂಡಿ ಬಗ್ಗೆ ಮಂಗಳೂರು ಮಹಾ-ನಗರ ಪಾಲಿಕೆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು. ಆದರೆ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮಲೇರಿಯ ಹರಡಲು ಸೊಳ್ಳೆಗಳೇ ಮೂಲಕಾರಣ. ಒಳಚರಂಡಿಯಲ್ಲಿ, ಒಳಚರಂಡಿಯ ಅವ್ಯವಸ್ಥೆಯಿಂದ ಈ ರೋಗ ವ್ಯಾಪಕವಾಗಿ ಹಬ್ಬಿ ಅನಂತರ ಇಡೀ ದಕ್ಷಿಣ ಕನ್ನಡ ಜಿಲ್ಲೆಗೆ ಅದು ಹರಡಿದೆ. ಸುಮಾರು ಒಳ ಚರಂಡಿಯ ಟ್ರಾನ್ಸ್‌ಮಿಷನ್ ಪ್ಲಾಂಟ್ ನನ್ನ ಕ್ಷೇತ್ರದ ಗೋರಿ ಗುಡ್ಡ, ಫಿಶರೀಸ್ ಕಾಲೇಜಿನಲ್ಲಿ ಒಂದು ಕಡೆ ಉಂಟು. ಆದರೆ ಸರ್ಕಾರದ ವೈಫಲ್ಯದಿಂದಾಗಿ ಆ ಕೊಳಕು ನೀರನ್ನು ಸಮುದ್ರಕ್ಕೆ ಬಿಡುವ ಬದಲು ಬಯಲು ಪ್ರದೇಶಕ್ಕೆ ಬಿಟ್ಟಿದ್ದಾರೆ. ಹಾಗೇ ಕಾವೂರು ಪ್ರದೇಶದಲ್ಲಿಯೂ ಈ ತರಹ ಉಂಟು. ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ಆರ್ಥಿಕ ವ್ಯವಸ್ಥೆ ಇಲ್ಲದ್ದರಿಂದ ಒಳಚರಂಡಿ ವ್ಯವಸ್ಥೆಯನ್ನು ಸುಗಮವಾಗಿ ಮಾಡಲಿಕ್ಕೆ ಅವರಿಗೆ ಸಾಧ್ಯವಿಲ್ಲದಿರುವುದರಿಂದ ಈ ಬಯಲು ಗದ್ದೆಯಲ್ಲಿ ಹೋಗುತ್ತಿದೆ. ಇನ್ನು ಕೆಲವು ಕಡೆಗಳಲ್ಲಿ ಈ ಒಳಚರಂಡಿಯ ಪೈಪ್ ಲೈನ್ ಮೇಲೇ, ಮನೆಗಳನ್ನು ಕಟ್ಟಿ ಎಲ್ಲಿ ಡ್ರೈನೇಜ್ ಎಲ್ಲಾ ಬ್ಲಾಕ್ ಆಗಿದೆ, ಅಲ್ಲಿ ಡ್ರೈನೇಜನ್ನು ರಿಪೇರಿ ಮಾಡಲಿಕ್ಕೆ ಹೋಗದೆ ಇರುವುದರಿಂದ ಅದರ ಬಯಲಿನಲ್ಲೇ ಪಕ್ಕದಲ್ಲೇ ಆ ನೀರು ಹರಿದು ಹೋಗುತ್ತಿದೆ. ಮಂಗಳೂರು ಫಿಶರೀಸ್ ಕಾಲೇಜಿನ ಪಕ್ಕದಲ್ಲೇ ಇರುವಂತಹ ಡ್ರೈನೇಜ್ ಬ್ಲಾಕ್ ಆದ್ದರಿಂದ ಫಿಶರೀಸ್ ಕಾಲೇಜಿನ ಅವರಣ ಪೂರ್ತಿ ಈ ಕೊಳಕು ನೀರಿನಿಂದ ತುಂಬಿದೆ. ಅಲ್ಲಿಯ ಕಾಲೇಜಿನ ವಿದ್ಯಾರ್ಥಿಗಳು ಆ ನೀರನ್ನೇ ಕುಡಿಯುವಂತಹ ಪ್ರಸಂಗ ಬಂದಿದೆ. ಇನ್ನೊಂದು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಮಂಗಳೂರಿನ ಮುಳು ಹಿತ್ತಲಿನಲ್ಲಿ ಹರಕೆರೆ ಬಯಲು ಎಂಬ ಪ್ರದೇಶ ಇದೆ. ಅದೊಂದು ಹರಿಜನ ಕಾಲೋನಿ ಆದು. ಆ ಒಂದು ಪ್ರದೇಶದಲ್ಲಿ ಡ್ರೈನೇಜ್ ಹೊಡದು ಸುಮಾರು 4 ಹೆಕ್ಟೇರು ಜಾಗದಲ್ಲಿ 4 ಅಡಿ ಎತ್ತರದಷ್ಟು ಕೊಳಕು ನೀರಿನಿಂದ ತುಂಬಿದೆ. ಮಂಗಳೂರು ಮಹಾನಗರ ಪಾಲಿಕೆ 3 ಲಕ್ಷ ಖರ್ಚಿನಿಂದ ಈ ಒಂದು ಡ್ರೈನೇಜ್‌ನ್ನು ಕ್ಲೀನ್ ಮಾಡಬೇಕೆಂಬ, ದುರಸ್ತು ಮಾಡಬೇಕೆಂಬ ಕಾರ್ಯಕ್ರಮ ಇಟ್ಟುಕೊಂಡರು, ಕಳೆದ 3 ವರ್ಷಗಳಿಂದಲೂ ಮಾಡಲಿಲ್ಲ. ಈ ವಿಷಯ ಏನೆಂದರೆ, ಅಲ್ಲಿರುವ ಜಿಲ್ಲಾಧಿಕಾರಿಗಳೇ ಇದರ ಆಡಳಿತಾಧಿಕಾರಿಗಳಾಗಿದ್ದಾರೆ. ಅವರ ಗಮನಕ್ಕೆ ತಂದರೆ , ಅವರು ತಮ್ಮ ಅಸಹಾಯಕತೆಯನ್ನು ತಿಳಿಸುತ್ತಿದ್ದಾರೆ. ನಮ್ಮಲ್ಲಿ ದಿನನಿತ್ಯದ ತಿಂಗಳ ತಿಂಗಳ ಸರ್ಕಾರಿ ನೌಕರರ ಸಂಬಳ ಬಟವಾಡೆ ಮಾಡಲಿಕ್ಕೂ ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ಹಣದ ಕೊರತೆ ಇರುವುದರಿರದ ಈ ತರಹದ ಕಾಮಗಾರಿಗಳನ್ನು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ನಾವು ಸರ್ಕಾರದ ಹತ್ತಿರ ಏನಂತಿ ಮಾಡುವುದು ಏನೆಂದರೆ, ದಯಮಾಡಿ ಮಂಗಳೂರು ಮಹಾ ನಗರ ಪಾಲಿಕೆಯ ಒಳಚರಂಡಿ ವ್ಯವಸ್ಥೆ ಸುಮಾರು 25-30 ವರ್ಷಗಳು ಕೆಳಗಿನದ್ದು. ಈಗ ಮಂಗಳೂರು ಮಹಾ ನಗರ ಪಾಲಿಕೆ ವ್ಯಾಪಕವಾಗಿ ಬೆಳೆದಿದೆ. ಮುಂಚೆ ಬೇರೇನೆ ಒಳಚರಂಡಿ ವ್ಯವಸ್ಥೆ ಮಾಡಲಿಕ್ಕೆ ಈ ಕರ್ನಾಟಕ ರಾಜ್ಯ ಸರ್ಕಾರ ಕನಿಷ್ಟ 100 ಕೋಟಿ ರೂಪಾಯಿಗಳನ್ನು ಮಂಗಳೂರು ಮಹಾ ನಗರ ಪಾಲಿಕೆಗೆ ಕೊಟ್ಟು ಶಾಶ್ವತವಾದಂತಹ ಒಳಚರಂಡಿ ವ್ಯವಸ್ಥೆಯನ್ನು ಮಾಡಿದರೆ, ಈ ಒಂದು ಮಲೇರಿಯ ರೋಗವನ್ನು ಖಂಡಿತವಾಗಿ ತಡೆಗಟ್ಟಬಹುದು. ಯಾವತ್ತೂ ಈ ಒಂದು ಒಳಚರಂಡಿ ವ್ಯವಸ್ಥೆ ಸುಧಾರಣೆಯಾಗದಿದ್ದರೆ ಖಂಡಿತ ಈ ಮಲೇರಿಯಾ ರೋಗವನ್ನು ಹತೋಟಿಗೆ ತರಲಿಕ್ಕೆ ಸಾಧ್ಯ ಇಲ್ಲವೆಂದು ನಾನು ವಿನಂತಿ ಮಾಡುತ್ತಾ, ದಯಮ್ಮಾಡಿ ಸರ್ಕಾರದವರು ಇದನ್ನು ಗಂಭೀರವಾಗಿ ತೆಗೆದುಕೊಂಡು

ನೂರಾರು, ಮುಂದೆ ಸಾವಿರಾರು ಜನರು ಮೃತರಾಗದಂತೆ ಅದನ್ನು ನಿಲ್ಲಿಸಲು ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

+ಶ್ರೀ ಡಿ.ವಿ.ಸದಾನಂದ ಗೌಡ:- ಆದರಣೀಯ ಸಭಾಧ್ಯಕ್ಷರೆ, ಪ್ರಾಯಶಃ ಈ ಮಲೇರಿಯಾ ರೋಗ, ಇದಕ್ಕೆ ನಾವು ಡಾಕ್ಟರ್ ಇಲ್ಲ, ಆಸ್ಪತ್ರೆ ಇಲ್ಲ, ಅಲ್ಲಿ ಟೆಕ್ನೀಷಿಯನ್ ಇಲ್ಲ ಅಂತ ಹೇಳುವುದರ ಬದಲು prevention is better than cure, ಅಂತ ಹೇಳುವಂತಹ ರೀತಿಯಲ್ಲಿ ಸೊಳ್ಳೆಯಿಂದಲೇ ಈ ಕಾಯಿಲೆ ಬರುವಂತಹದ್ದು. ಸೊಳ್ಳೆ ಹರಡುವುದನ್ನು ನಿಲ್ಲಿಸುವಂತಹ ವ್ಯವಸ್ಥೆಯಾಗಬೇಕು. ಪ್ರಾಯಶಃ ವಿಧಿವತ್ತ ಆರೋಗ್ಯ ಮಂತ್ರಿಗಳು ಮಾಡುವುದರ ಜೊತೆಗೆ ಇತರೇ ಇಲಾಖೆಗಳು ಇದಕ್ಕೆ ಸಂಬಂಧಪಟ್ಟವರು ಇದ್ದಾರೆಂಬುದಾಗಿ ನಾನು ಭಾವಿಸುತ್ತೇನೆ. ಏಕೆಂದರೆ ಹಿಂದೆ ಎಲ್ಲಾ ಕಡೆ ಒಂದು ಸಮಿತಿಯನ್ನು ಮಾಡುತ್ತಿದ್ದರು; ಇಂತಹ ಸಂದರ್ಭದಲ್ಲಿ. ಡಿ.ಹೆಚ್.ಒ.ಯಿಂದ ಹಿಡಿದು ಡಿ.ಸಿ.ಯಿಂದ ಹಿಡಿದು ಮತ್ತು ಬಾಕಿ ಎಲ್ಲಾ ಇಲಾಖೆಯವರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡುತ್ತಿದ್ದರು. ಎಲ್ಲರಿಗೂ ಅದರ ವಿಚಾರಗಳನ್ನು ತಿಳಿಸುವುದರ ಮೂಲಕ ವ್ಯವಸ್ಥೆ ಮಾಡುತ್ತಿದ್ದರು. ಇವತ್ತು ನನಗೆ ತಿಳಿದ ಮಟ್ಟಿಗೆ, 24 ನೇ ತಾರೀಖಿನ ಉದಯವಾಣಿಯಲ್ಲಿ ಪ್ರಾಯಶಃ ನಮ್ಮ ಆರೋಗ್ಯ ಮಂತ್ರಿಗಳು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. 24ನೇ ತಾರೀಖಿನ ಉದಯವಾಣಿ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಸೂಳ್ಯ ತಾಲ್ಲೂಕಿನಲ್ಲಿ 4 ಮೃತ್ಯುಗಳು ಮಲೇರಿಯಾದಿಂದಲೇ ಆಗಿದೆ. ಕೇವಲ ಮಂಗಳೂರು ನಗರ ಪಾಲಿಕೆಯಲ್ಲೇ ಇರುವಂತಹದ್ದಲ್ಲ. ಪುತ್ತೂರಿನಲ್ಲಿ ವಿಶೇಷ ಅಂತ ಹೇಳಿದರೆ, ಪುತ್ತೂರಿನ ಮಾಜಿ ಪುರಸಭಾಧ್ಯಕ್ಷರು ಮಲೇರಿಯಾ ಪೀಡಿತರಾಗಿ ಅನಾರೋಗ್ಯದಿಂದ್ದಾರೆ ಎಂದು ಹೇಳಿದರೆ ಪ್ರಾಯಶಃ ಬಾರಿ ಬೇಸರವಾಗುತ್ತದೆ. ಮಂಗಳೂರು ಮಹಾ ನಗರಪಾಲಿಕೆಯಲ್ಲಿ ಅಲ್ಲಿರುವ ಆರೋಗ್ಯ ತಪಾಸಣಾಧಿಕಾರಿಗಳು, 2 ಸಾರಿ ಮಲೇರಿಯಾ ಪೀಡತರಾಗಿದ್ದಾರೆ. ಇದರ ವ್ಯವಸ್ಥೆಯಿಂದಲೇ ಯಾವುದನ್ನು ಎರಾಡಿಕೇಟ್ ಮಾಡಬೇಕು, ಈ ಸೊಳ್ಳೆಗಳ ಕಾಟವನ್ನು ನಿಲ್ಲಿಸಬೇಕು ಅಂತ ಹೇಳುವಂತಹ ವ್ಯವಸ್ಥೆ ಇದು ಆಗುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಯಾರು ರೋಗಿಗಳು ಇದ್ದಾರೆ., ಆ ರೋಗಿಗಳ ಶುಶ್ರೂಷೆಗೆ ನಿಂತಂತಹ ವ್ಯಕ್ತಿಗಳಿಗೇ ಮಲೇರಿಯಾ ಅಟ್ಯಾಕ್ ಆಗಿದೆ. ಇದಕ್ಕೊಂದು ಹಿನ್ನೆಲೆ ಇದೆ. ಅಲ್ಲಿರುವಂತಹ ವ್ಯವಸ್ಥೆ ಸರಿ ಇಲ್ಲ. ಸೊಳ್ಳೆ ಪರದೆಗಳನ್ನು ವ್ಯಾಪಕವಾಗಿ ಎಲ್ಲಾ ಆಸ್ಪತ್ರೆಗಳಿಗೆ ಕೊಡುವುದರ ಮೂಲಕ ಇತರೆ ರೋಗಿಗಳಿಗೆ ಸೊಳ್ಳೆಗಳು ಕಚ್ಚದ ರೀತಿಯಲ್ಲಿ ವ್ಯವಸ್ಥೆ ಮಾಡುವುದು ಅವಶ್ಯಕತೆ ಇದೆ. ಯಾವುದೇ ಆಸ್ಪತ್ರೆಯಲ್ಲಿ ಈ ವ್ಯವಸ್ಥೆ ಇಲ್ಲ. ಮಲೇರಿಯಾ ಎಲ್ಲೆಲ್ಲಿ ತಗುಲಿದೆ, ಆ ಎಲ್ಲ ಆಸ್ಪತ್ರೆಗಳ ಸರಿಹದ್ದಿನಲ್ಲಿರುವ ರೋಗಿಗಳಿಗೆ, ಮಲೇರಿಯಾದ ಸೊಳ್ಳೆಗಳು ವ್ಯಾಪಕವಾಗಿ ಹರಡದ ರೀತಿಯಲ್ಲಿ ಸೊಳ್ಳೆ ಪರದೆಗಳನ್ನು ಕೊಡುವಂತಹದ್ದು ಅತೀ ಅವಶ್ಯಕವಾಗಿ ಆಗಬೇಕಾಗಿದೆ. ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಕ್ಷಣ ಮಂಗಳೂರಿನ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಸೊಳ್ಳೆ ಪರದೆಗಳನ್ನು ಕೊಡುವುದರ ಮುಖಾಂತರ ಆಸ್ಪತ್ರೆಯಲ್ಲೆ ಒಂದು ರೋಗಿಯಿಂದ ಇನ್ನೊಬ್ಬ ರೋಗಿಗೆ ಇದು ಹರಡುವುದುನ್ನು ನಿಲ್ಲಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಈ ಬಗ್ಗೆ ಸರ್ಕಾರವನ್ನು ವಿನಂತಿ ಕೂಡ ನಾನು ಮಾಡಿಕೊಳ್ಳುತ್ತಾ ಇದ್ದೇನೆ. ಜೊತೆಜೊತೆಯಲ್ಲಿ ಸಾರ್ವಜನಿಕರಿಗೆ ಗಮನ. ಸೂಳ್ಯದಲ್ಲಿ ಏನಾಗಿದೆ ಅಂದರೆ, ಒಬ್ಬ ಕಾಲೇಜಿನ ವಿದ್ಯಾರ್ಥಿನಿ ಕೂಡ

ಮಲೇರಿಯಾದ ಪೀಡಿತರಾಗಿದ್ದಾರೆ. ಈ ವ್ಯವಸ್ಥೆಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುವಂತಹ ಜಾಗಗಳಲ್ಲೂ ಕೂಡ ಡಿ.ಡಿ.ಟಿ.ಸ್ಪ್ರೇ, ಇತರೆ ಸ್ಪ್ರೇಯನ್ನು ಅತೀ ಅವಶ್ಯಕವಾಗಿ ಮಾಡಬೇಕಾಗಿದೆ. ಇದಕ್ಕೆ ಅಲ್ಲಿರುವ ಅಧಿಕಾರಿಗಳು ಎಚ್ಚೆತ್ತುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ಸೊಳ್ಳೆ ನಿವಾರಣೆಯಿಂದಲೇ ಇದು ಸಾಧ್ಯ. ಮತ್ತೆ ಟೆಕ್ನಿಸೀಯನ್ಸ್ ಬಗ್ಗೆ ಹೇಳಬೇಕಾಗಿಲ್ಲ. ಮೊನ್ನೆ ಮೊನ್ನೆ ಉತ್ತರ ಕೊಟ್ಟಿದ್ದಾರೆ, ಸುಮಾರು 160 ರಕ್ತ ಪರೀಕ್ಷೆಯನ್ನು ಮಾಡುವಂತಹ ಟೆಕ್ನಿಸೀಯನ್‌ಗಳು ಇಲ್ಲ ಎಂದು ಹೇಳಿದ್ದಾರೆ. ಇವತ್ತು ಇದರಿಂದಾಗಿ ಇನ್ನೆಷ್ಟು ಜನ ಮಲೇರಿಯಾ ಪೀಡಿತರಾಗಿದ್ದಾರೋ ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿರುವ ಮದ್ದಿನ ವ್ಯವಸ್ಥೆ ಇನ್ನೂ ಕೂಡ ಸರಿಯಾಗಿಲ್ಲ. ಅದರ ಪಟ್ಟಿಯನ್ನು ಕೊಟ್ಟರೂ ಕೂಡ ಕೆಲವೊಂದು ಸ್ಥಳಗಳಿಗೆ ಅಂದರೆ ಸೂಳ್ಯದಲ್ಲಿರುವ 11 ಪ್ರಾಥಮಿಕ ಆಸ್ಪತ್ರೆಗಳಲ್ಲಿ 7 ಆಸ್ಪತ್ರೆಗಳಲ್ಲಿ ಅದಕ್ಕೆ ಇನ್ನೂ ವೈದ್ಯರೇ ಇಲ್ಲದ ಕಾರಣ, ಅಲ್ಲಿ ಮಲೇರಿಯಾ ಇಲ್ಲವೋ ಅಥವಾ ಉಂಟೋ ಎಂಬುದನ್ನು ನೋಡತಕ್ಕಂತಹ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಆದಕಾರಣ ತಕ್ಷಣ ಆಸ್ಪತ್ರೆಗಳಲ್ಲೂ ಕೂಡ ವ್ಯವಸ್ಥೆ ಮಾಡುವಂತಹ ವ್ಯವಸ್ಥೆಯಾಗಬೇಕು. ಎಲ್ಲಾ ಆಸ್ಪತ್ರೆಗಳಲ್ಲೂ ಕೂಡ ಬಾಕಿ ರೋಗಿಗಳಿಗೆ ಇದು ತಗಲದಂತೆ ಮತ್ತೆ ರೋಗಿಗಳ ಶುಶ್ರೂಷೆಗೆ ಬಡವರು ಮಲೇರಿಯಾ ಪೀಡಿತರಾಗದಂತಹ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳುವಂತಹ ವಿಚಾರವನ್ನು ಕೂಡ ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಯೋಗೀಶ್ ಭಟ್:- ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರಪಾಲಿಕೆಯಲ್ಲಿ ಈಗಾಗಲೇ ಸಿಕ್ಕಿದ ವರದಿ ತಾವು ಆರೋಗ್ಯ ಮಂತ್ರಿಗಳು ಹೇಳಿದ ವರದಿಗಿಂತ ನಿಜವಾಗಿಯೂ ವಸ್ತು ಸ್ಥಿತಿ ಬೇರೆ ಇದೆ. ಸುಮಾರು 13,400 ಮಲೇರಿಯಾ ಪೀಡಿತರ ವರದಿ ಈಗಾಗಲೇ ಬಂದಿದೆ. ಸಿಲಿಬ್ರಿಲ್ ಮಲೇರಿಯಾ ರೋಗ ಅಂತ ತಿಳಿದುಕೊಂಡು 20 ಸಾವು ಈಗಾಗಲೇ ಆಗಿದೆ. ಬಹುಶಃ ಒಬ್ಬ ಮಲೇರಿಯಾ ರೋಗಿಗೆ ತಮ್ಮ ಶುಶ್ರೂಷೆ ಮತ್ತು ಆ ಒಂದು ಸಂದರ್ಭದಲ್ಲಿ ತಮ್ಮ ಲಾಸ್ - ಆಫ್- ಪೇ ಇವೆಲ್ಲವನ್ನು ಗಮನಕ್ಕೆ ತೆಗೆದುಕೊಂಡರೆ ಸುಮಾರು 1 ಸಾವಿರದಷ್ಟು ಖರ್ಚು ಬರುವಂತಹದ್ದನ್ನು ಲೆಕ್ಕಕ್ಕೆ ಹಾಕಿದರೆ, ಸುಮಾರು 1.5 ಕೋಟಿಯಷ್ಟು ನಷ್ಟ ಈಗಾಗಲೇ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಆಗಿದೆ. ಬಹುಶಃ ಈ ರೋಗ ಇದೇರೀತಿ ಉಲ್ಬಣಗೊಂಡರೆ ಇದು ಕೆಲವು ಕೋಟಿಗಳ ನಷ್ಟ ಆಗುವ ಸಾಧ್ಯತೆ ಇದೆ. ಅದಕ್ಕಿಂತ ಜಾಸ್ತಿಯಾಗಿ ಅನೇಕ ರೀತಿಯಲ್ಲಿ ಅನೇಕರು ಸಾವುಗಳಿಗೆ ತುತ್ತಾಗುವ ಸಾಧ್ಯತೆಗಳು ಇವೆ. ಈ ನಿಟ್ಟಿನಲ್ಲಿ ಸರ್ಕಾರ ಹೆಚ್ಚಿನ ಗಂಭೀರ ರೀತಿಯಲ್ಲಿ ಕಾಳಜಿಯನ್ನು ವಹಿಸಬೇಕು. ಅದಕ್ಕೋಸ್ಕರ ಕೆಲವು ಸಲಹೆಗಳನ್ನು ತಮ್ಮ ಮುಂದೆ ಇಡಲಿಕ್ಕೆ ಪ್ರಯತ್ನಿಸುತ್ತೇನೆ. ಈಗಾಗಲೇ ಮಂಗಳೂರು ನಗರದ ವೈದ್ಯರುಗಳು 30 ವೈದ್ಯರುಗಳು ಮತ್ತು ಅನೇಕ ಎನ್.ಎಸ್.ಯು.ಐ. ವಿದ್ಯಾರ್ಥಿಗಳು ಇನ್ನಿತರ ಸಂಘಟನೆಗಳು ಸೇರಿಕೊಂಡು ಮನೆ ಮನೆಗೆ ಹೋಗಿ ಇದರ ಬಗ್ಗೆ ಹೆಚ್ಚಿನ ಅವೇರ್ನೆಸ್ ಕ್ರಿಯೇಟ್ ಮಾಡುವಂತಹದ್ದು. ಅದೇ ರೀತಿಯಲ್ಲಿ ಮಂದಿರಗಳಲ್ಲಿ, ಚರ್ಚ್‌ಗಳಲ್ಲಿ ಹಾಗೂ ಮಸೀದಿಗಳಲ್ಲಿ ಕೂಡ ಇದರ ಬಗ್ಗೆ ಹೆಚ್ಚಿನ ಅವೇರ್ನೆಸ್ ಕ್ರಿಯೇಟ್ ಮಾಡುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇಷ್ಟು ಮಾತ್ರ ಅಲ್ಲ, ಅನೇಕ ರೀತಿ ಸಿನೆಮಾ ಸ್ಲೈಡ್ಸ್‌ಗಳ ಮೂಲಕ ಜನರಿಗೆ ಜಾಗೃತಿಯನ್ನು ಉಂಟುಮಾಡುವಂತಹ ಕಾರ್ಯಕ್ರಮಗಳನ್ನು ಹಾಕಿದ್ದರೂ ಕೂಡ ಈಗ ಸರ್ಕಾರದ ಕಡೆಯಿಂದ ನಾವು ಸಹಾಯವನ್ನು ಅಪೇಕ್ಷಿಸುವುದು ಈ ಕೆಳಗಿನ

ಡಿಮ್ಯಾಂಡ್‌ಗಳನ್ನು ನಾನು ಇಡಲಿಕ್ಕೆ ಇಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ಪೂರ್ಣ ಪ್ರಮಾಣದ ನಗರ ಅರ್ಬನ್ ಮಲೇರಿಯಾ ಕಂಟ್ರೋಲ್ ಯೂನಿಟ್ಟನ್ನು ನಮ್ಮ ಮಂಗಳೂರು ನಗರಕ್ಕೆ ಮಂಜೂರು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಇದೇನು?

ಅಧ್ಯಕ್ಷರು :- ಗಮನ ಸೆಳೆಯುವುದು.

ಶ್ರೀ ವಾಟಾಳ್ ನಾಗರಾಜ್:- ಗಮನ ಇನ್ನೂ ಸೆಳೆದಿಲ್ಲವೆ;

ಅಧ್ಯಕ್ಷರು:- ಸೆಳೆದದ್ದಾಯಿತು. ವಿವರಣೆಗಳು . ಎಲ್ಲರೂ ಒಂದೇ ಸಾರಿ ಕೇಳಿ ಬಿಡಲಿ, ಉತ್ತರ ಒಂದೇ ಸಾರಿ ಕೊಡಲಿ ಎಂದು ನಾನೇ ಹೇಳಿದ್ದೇನೆ.

ಶ್ರೀ ಬಿ.ರಮಾನಾಥ ರೈ:- ಶ್ರೀ ವಾಟಾಳ್ ನಾಗರಾಜ್ ರವರಿಗೆ ನೋವು ಏನು? ಅಲ್ಲೊಂದು ಗಂಭೀರ ಪರಿಸ್ಥಿತಿ ಇದೆ. ಹಿರಿಯ ಸದಸ್ಯರೊಬ್ಬರು ನಮ್ಮ ಮಾತುಗಳನ್ನು ವ್ಯಂಗ್ಯ ಮಾಡುವಂತಹದ್ದು ಸರಿಯಾದ ಕ್ರಮ ಅಲ್ಲ. ನಾನು ಅದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತೇನೆ. ನನ್ನ ಮಾತಿನಲ್ಲಿ ತಪ್ಪಾಗಿರಬಹುದು. ಅದನ್ನೇ ತಪ್ಪಾಗಿ ತೆಗೆದುಕೊಂಡು ವ್ಯಂಗ್ಯವಾಗಿ ಮಾತನಾಡುವುದು ಸರಿಯಲ್ಲ. ಬಹಳ ಗಂಭೀರವಾದ ಪರಿಸ್ಥಿತಿ ಜಿಲ್ಲೆಯಲ್ಲಿದೆ.

ಅಧ್ಯಕ್ಷರು:- ಇರಲಿ, ರಮಾನಥ್ ರೈ ರವರೆ.

ಶ್ರೀ ಬಿ.ರಮಾನಾಥ ರೈ:- ಇನ್ನೊಬ್ಬರು ಆ ಬಗ್ಗೆ ತೊಂದರೆ ಕೊಡತಕ್ಕಂತಹದ್ದು ಸಾಧುವಾದುದಲ್ಲ ಎಂಬುದನ್ನು ತಮ್ಮ ಮೂಲಕ ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ ತಾವು ಅರ್ಥ ಮಾಡಿಕೊಳ್ಳಬೇಕು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನಾದರೂ ಇಂತಹ ಒಂದು ಗಂಭೀರ ಪರಿಸ್ಥಿತಿಯಾದರೆ ಇತರ ಭಾಗದ ಜನರಿಗೆ ಅದು ಬಹಳಷ್ಟು ತಮಾಷೆಯಾಗಿ ಕಾಣುತ್ತದೆ ಅಲ್ಲ, ನಾನು ಮಾತನಾಡುವಾಗ ವ್ಯಂಗ್ಯವಾಗಿ ನನ್ನ ಮಾತನ್ನು ಸನ್ಮಾನ್ಯ ಸದಸ್ಯರು ಆಡಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್:- ಯಾರು ವ್ಯಂಗ್ಯ ಮಾಡಿದ್ದು? ಇವರು ಬಹಳ ಬೇಜವಾಬ್ದಾರಿಯಿಂದ ಮಾತನಾಡಬಾರದು. ಸ್ವಲ್ಪ ನಿಷ್ಠೆಯಿಂದ ಮಾತನಾಡಲಿ. ನನಗೂ ಗೊತ್ತಿದೆ ದಕ್ಷಿಣ ಕನ್ನಡ ಜಿಲ್ಲೆ ಇವರ ಸ್ವತ್ತೇನೂ ಅಲ್ಲ. ಇಡೀ ಕರ್ನಾಟಕ ನನಗೆ ಬೇಕಾದದ್ದು.

ಶ್ರೀ ಬಿ.ರಮಾನಾಥ್ ರೈ :- ನಾನು ಯಾವಾಗಲಾದರೂ ಒಮ್ಮೆ ಮಾತನಾಡುವಾಗ ಇವರು ಮಧ್ಯೆ ಮಧ್ಯೆ ಬಾಯಿ ಹಾಕಿ ಮಾತನಾಡುವುದು ಹಾಸ್ಯ ಮಾಡಲಿಕ್ಕೆ ಟ್ರೈ ಮಾಡುವುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಇದು ಮೈಸೂರು ಜಿಲ್ಲೆ, ಬೆಂಗಳೂರು ಜಿಲ್ಲೆಯಲ್ಲ ಇದು. ಮಲೇರಿಯಾದ ವಿಷಯ ಎಲ್ಲಾ ಜಿಲ್ಲೆಗೂ ಬೇಕಾಗಿದೆ. ಇವರೊಬ್ಬರಿಗೆ ಅದು ಸ್ವತ್ತೇನೂ ಅಲ್ಲ. ಬೇರೆ ವಿಚಾರ ಬರೀ ದಕ್ಷಿಣ ಕನ್ನಡಕ್ಕೆ ಅಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ನಮಗೂ ಗೌರವವಿದೆ. ಏನು ಮಾತನಾಡುತ್ತಾರೆ ಇವರು?

ಶ್ರೀ ಬಿ.ರಮಾನಾಥ್ ರೈ:- ನಾನು ಮಾತನಾಡುವಾಗ ಯಾವಾಗಲೂ ಅವರು ಮಾತನಾಡುತ್ತಾರೆ ಹಾಗೆ ಏಕೆ ಮಾತನಾಡುವುದು?

ಶ್ರೀ ಎನ್.ಯೋಗೀಶ್ ಭಟ್:- ನನ್ನದೊಂದು ಪ್ರಶ್ನೆಯಿದೆ, ಈ ಸದನದ ಹೆಚ್ಚಿನ ಸಮಯವನ್ನು ಹಿರಿಯ ಶಾಸಕರಾದ ವಾಟಾಳ್ ನಾಗರಾಜ್‌ರವರು ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ 13 ಸಾವಿರಕ್ಕಿಂತ ಹೆಚ್ಚು ಜನ ಮಲೇರಿಯಾ ರೋಗಕ್ಕೆ ಪೀಡಿತರಾಗಿರುವಾಗ ಕಳೆದ 15 ದಿವಸಗಳಿಂದ ಚರ್ಚೆ ಮಾಡಲಿಕ್ಕೆ ಆಗಲಿಲ್ಲ.

ಅಧ್ಯಕ್ಷರು:- ಆಯಿತು.

ಶ್ರೀ ಬಿ.ರಮಾನಾಥ್ ರೈ :- ಇಷ್ಟು ಗಂಭೀರವಾಗಿರತಕ್ಕ ಪರಿಸ್ಥಿತಿ ಇರುವಾಗ ಇಷ್ಟು ಲಘುವಾಗಿ ಮಾತನಾಡತಕ್ಕದ್ದು ಆಗಬಾರದು.

ಶ್ರೀ ವಾಟಾಳ್‌ನಾಗರಾಜ್:- ಈಗ ತಾವು. ನಾನು ಯಾವುದು ಲಘುವಾಗಿ ಮಾತನಾಡಿದ್ದುದು, ಇದೇನು ನನಗೆ ಅರ್ಥವಾಗುವುದಿಲ್ಲ.

(ಗೊಂದಲ)

ಶ್ರೀ ಎಂ.ವೀರಪ್ಪಮೊಯಿಲಿ :- ಮಾನ್ಯ ಅಧ್ಯಕ್ಷರೆ,..

MR.SPEAKER:- The matter is going somewhere.

ಶ್ರೀ ಎಂ.ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ ಬಹಳ ಗಂಭೀರವಾದ ಸಮಸ್ಯೆ, ಕ್ಷಮಿಸಬೇಕು, ಅವರು ಬಹಳ ದುಃಖದಿಂದ ಸಂಕಷ್ಟದಿಂದ ಇದನ್ನು ಹೇಳುತ್ತಿದ್ದಾರೆ. ಆಗ ಇವರು ಬೇಜವಾಬ್ದಾರಿಯಿಂದ ಹೇಳುತ್ತಿದ್ದಾರೆಂದು ಹಾಗೆ ಹೇಳಬಾರದು. ರಮಾನಾಥ್ ರೈ ಅವರಿಗೆ ಹೇಳಬಾರದು.

ಅಧ್ಯಕ್ಷರು:- ತಾವು ಹಿರಿಯಸದಸ್ಯರು, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅವರು ನಿಮ್ಮ ತಮ್ಮಂದಿರು ಎಂದು ತಿಳಿದುಕೊಳ್ಳಿ ಪಾಪ ಸಹಕರಿಸಿ.

ಶ್ರೀ ವಾಟಾಳ್‌ನಾಗರಾಜ್:- ಸ್ವಾಮಿ ಒಂದು ನಿಮಿಷ. ಇವರು ಮಲೇರಿಯಾ ವಿಷಯ ಹೇಳುವಾಗ ಬೇಜವಾಬ್ದಾರಿಯೆಂದು ನಾನು ಹೇಳಲಿಲ್ಲ. ಮೊಯಿಲಿಯವರಿಗೆ ಎಷ್ಟು ಕಳಕಳಿ ಅವರ ಹೃದಯದಲ್ಲಿ ಆ ದುಃಖ ಏನೇನು ಇದೆ ಅದರ ಹತ್ತು ಪಟ್ಟು ನಮಗೂ ಇದೆ. ನಾನೇನು ದಕ್ಷಿಣ ಕನ್ನಡ ಜಿಲ್ಲೆ, ಮೈಸೂರು ಜಿಲ್ಲೆ, ಕೊಡಗು ಜಿಲ್ಲೆಯೆಂದು ಬೇರೆ ಬೇರೆ ಮಾಡುವುದಕ್ಕೆ ಹೋಗುವುದಿಲ್ಲ. ಇಡೀ ಕರ್ನಾಟಕ ಒಂದೇ ಎಂದು ಹೇಳತಕ್ಕ ಮನುಷ್ಯ. ನನಗೇನೂ ಕಡಿಮೆಯಿಲ್ಲ ಅವರಷ್ಟೇ ಕಳಕಳಿ ನನಗೂ ಇದೆ; ನೋವು ಇದೆ, ಇವರು ಹೇಳಿದ ತಕ್ಷಣ ಕಳಕಳಿಯಿಲ್ಲ ಎನ್ನತಕ್ಕದ್ದು, ನಮಗೊಬ್ಬರಿಗೆ ಕಳಕಳಿ ಈ ಸಭೆಯಲ್ಲಿ ಬೇರೆ ಯಾರಿಗೂ ಇಲ್ಲ ಎನ್ನತಕ್ಕದ್ದು ಬೇಡ. ಅದಕ್ಕೆ ಮಾನ್ಯ ಮೊಯಿಲಿಯವರ ಬೆಂಬಲವೂ ಬೇಕಾಗಿಲ್ಲ, ನನಗೆ ಗೊತ್ತಿದೆ.

ಶ್ರೀ ಎಂ.ವೀರಪ್ಪಮೊಯಿಲಿ:- ತಾವು ಎಲ್ಲರನ್ನೂ ಮೇಲೆ ಹಾಕಿಕೊಂಡು ಮಾತನಾಡಲಿಕ್ಕೆ ಆಗುವುದಿಲ್ಲ. ಜಿಲ್ಲೆಯ ವಿಷಯ ಏಕೆ ಬಂತು? ನಮ್ಮ ಜಿಲ್ಲೆಯಲ್ಲಿ ಮಲೇರಿಯಾ ಇದೆಯೆಂದು ಹೇಳುತ್ತೇವೆ. ಈ ತರಹ ವಾಟಾಳ್‌ನಾಗರಾಜ್‌ರವರು ಬುಲ್ಡೋಜ್ ಮಾಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ಹೇಗೆ ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸುವುದು, ತಾವು ದಯಮಾಡಿ ನಮಗೆ ಅವಕಾಶ ಕೊಡಬೇಕು. ಇಲ್ಲಿ ಪ್ರಶ್ನೆ ಏನೆಂದರೆ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ಬಂದಿದೆ ಎಂದು ಹೇಳಿದ ಕೂಡಲೇ, ಅದೇನು ದಕ್ಷಿಣ ಕನ್ನಡ ಜಿಲ್ಲೆ

ಮಾತ್ರ ಎಂದರೆ ಏನು ಇದರ ಅರ್ಥ? ಹಾಗಾದರೆ ಅವರು ಇಡೀ ಕರ್ನಾಟಕ ರಾಜ್ಯದಲ್ಲೆಲ್ಲ ಮಲೇರಿಯಾ ಹರಡಿದೆಯೆಂದು ಹೇಳಬೇಕಾ? ಅದಕ್ಕೆ ವೀರಪ್ಪಮೊಯಿಲಿಯವರು ಹೀಗೆ ಮಾಡಿದರು ಎಂದು ನನ್ನ ಹೆಸರು ಏಕೆ ಹೇಳಬೇಕು? ನಾನು ಹೇಳಿದ್ದು ಬೇಜವಾಬ್ದಾರಿಯಿಂದ ಮಾನ್ಯಸದಸ್ಯರು ಮಾತನಾಡುತ್ತಿದ್ದಾರೆಂದು ಹೇಳತಕ್ಕದ್ದು ಬಹುಶಃ ಸೌಜನ್ಯಕ್ಕೆ ಸರಿಯಾದ ಮಾತು ಕಾಣುವುದಿಲ್ಲ. ತಾವು ದಯಮಾಡಿ ಪರಿಶೀಲನೆ ಮಾಡಬೇಕು. ಏಕೆಂದರೆ ಈಗ ಪ್ರತಿಯೊಬ್ಬರೂ ಮಾತನಾಡುವಾಗ ಕೂಡ ಬೇಜವಾಬ್ದಾರಿಯಿಂದ ಮಾತನಾಡುತ್ತಾರೆಂದು ಹೇಳಿದರೆ ಸರಿಯೆ?

ಅಧ್ಯಕ್ಷರು:- ನಾನು ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರೇ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್‌ನಾಗರಾಜ್:- ಸ್ವಾಮಿ, ನಾನು ಯಾವುದಕ್ಕೆ ಹೇಳಿದ್ದೇನೆ; ನನಗೆ ಅರ್ಥವಾಗಲಿಲ್ಲ. ಅವರು ಮಲೇರಿಯಾ ಪ್ರಶ್ನೆಯನ್ನು ಎತ್ತಿದ್ದರ ಬಗ್ಗೆ ನಾನು ಯಾವತ್ತೂ ಬೇಜವಾಬ್ದಾರಿಯಿಂದ ಮಾತನಾಡುವುದಿಲ್ಲ. ನಾನು ಮಾತನಾಡುವಾಗ ಮಧ್ಯೆ ಮಧ್ಯೆ ಬಾಯಿ ಹಾಕುತ್ತಾರೆನ್ನುವಾಗ ಆ ಮಾತಿಗೆ ಉತ್ತರ ಕೊಟ್ಟೆನೇ ಹೊರತು ಅದಕ್ಕೆ ಮಾನ್ಯ ಮೊಯಿಲಿಯವರು ನಮ್ಮ ಸಮಸ್ಯೆ ನಿಮಗೆ ಬೇಜವಾಬ್ದಾರಿಯೆನ್ನುವ ರೀತಿಯಲ್ಲಿ ತಿರುಗಿಸಿದರೆ ಅದು ಸರಿಯಲ್ಲ.

ಶ್ರೀ ಬಿ.ರಮಾನಾಥ್ ರೈ:- ಮಾನ್ಯ ಅಧ್ಯಕ್ಷರೆ, ತಾವು ಈ ಸಭೆಯ ನಡವಳಿಕೆಯನ್ನು ನೋಡುತ್ತಿದ್ದೀರಿ, ರೋಗವೆಂದು ಹೇಳುವಾಗ ಮಾತಿನಲ್ಲಿ ಸ್ವಲ್ಪ ವ್ಯತ್ಯಾಸವಾಯಿತು. ಅದನ್ನೇ ಅಷ್ಟು ಗಂಭೀರವಾಗಿ ಎದ್ದುನಿಂತುಕೊಂಡು ರೋಗ ಯಾವ ರೋಗ, ಈ ತರಹ ಲಘುವಾಗಿ ಮಾತನಾಡತಕ್ಕದ್ದು ಸರಿಯಲ್ಲ.

ಅಧ್ಯಕ್ಷರು:- ಇದು ಭಾಷೆಯ ವ್ಯತ್ಯಾಸ.

ಶ್ರೀ ವಾಟಾಳ್‌ನಾಗರಾಜ್:- ಲಘುವಾಗಿ ಎನ್ನುವ ಪದ ಏನು ಹೇಳುತ್ತಿದ್ದಾರೆ ಅದು ಬೇಜವಾಬ್ದಾರಿ.

ಶ್ರೀ ಬಿ.ರಮಾನಾಥ್ ರೈ:- ನಮ್ಮ ಮಾತು ತಪ್ಪಿರಬಹುದು. ಹಿರಿಯಸದಸ್ಯರಾದ ಶ್ರೀ ವಾಟಾಳ್‌ನಾಗರಾಜ್‌ರವರು ಆ ತರಹ ಮಾಡಬಾರದು.

ಅಧ್ಯಕ್ಷರು:- ಭಾಷೆ, ಒಂದೊಂದು ಭಾಗದವರು ಒಂದೊಂದು ರೀತಿಯಲ್ಲಿ ಪ್ರಯೋಗ ಮಾಡುತ್ತೀರಿ. ನಮಗೆ ಇದೇ ಕಷ್ಟ ಬರುವುದು. ಎಲ್ಲಾ ಸದಸ್ಯರಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಾನು ಪ್ರತಿ ಅಕ್ಷರ ನಿಯಮಾವಳಿ ಪ್ರಕಾರ ಈ ಸದನ ನಡೆಸಬೇಕೆಂದರೆ ಇದು ಮಿಲಿಟರಿ ಸಿಸ್ಟಂ ಆಗುತ್ತದೆ. ನಾವು ಈ ವಿಚಾರವನ್ನು ಮೈಸೂರಿನಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೇವೆ. ಗಮನಸೆಳೆಯುವ ಸೂಚನೆಯನ್ನು ತಂದರೆ ಯಾವುದೇ ಒಂದು ಗಹನವಾದಂತಹ ವಿಚಾರದ ಬಗ್ಗೆ ತಾವು ನೋಟೀಸ್ ಕೊಡುತ್ತೀರಿ, ನೋಟೀಸ್ ಕೊಟ್ಟಮೇಲೆ ಸರ್ಕಾರದವರು ಉತ್ತರ ಕೊಡಲಿಕ್ಕೆ ತಯಾರಾಗಿ ಬರುತ್ತಾರೆ. ಅಜೆಂಡಾದಲ್ಲಿ ಅದನ್ನು ಇನ್‌ಕ್ಲೂಡ್ ಮಾಡುತ್ತೇವೆ. ನೀವು ಗಮನ ಸೆಳೆದ ಮೇಲೆ ಅವರೊಂದು ಹೇಳಿಕೆಯನ್ನು ಕೊಡುತ್ತಾರೆ. ಹೇಳಿಕೆಯನ್ನು ಕೊಟ್ಟು ಆದಮೇಲೆ ಆದರಲ್ಲಿ ಯಾವುದಾದರೂ ವಿಷಯ ಕವರ್ ಆಗದಿದ್ದರೆ ಅದರ ಬಗ್ಗೆ ನೀವು ವಿವರಣೆಯನ್ನು ಕೇಳಬೇಕು. ಅನೇಕ ಸದಸ್ಯರುಗಳು ನೀವು ಏನು ಮಾಡುತ್ತೀರಿ ಅಂದರೆ ಪ್ರಶ್ನೋತ್ತರ, ಗಮನಸೆಳೆಯತಕ್ಕದ್ದು, ಜೀರೋ ಅವರ್ ಎಲ್ಲವನ್ನೂ

ಭಾಷಣಕ್ಕೆ ಉಪಯೋಗಿಸುತ್ತೀರಿ. ನಾನು ಬೆಲ್ ಹೊಡೆಯವುದೋ ಎದ್ದುನಿಂತುಕೊಳ್ಳುವುದೋ ಮಾಡಿ ಅಡ್ಡಿ ಮಾಡಿದರೆ ನಮಗೆ ಹೊಸಬರಿಗೆ ಅವಕಾಶ ಸಿಗುವುದಿಲ್ಲವೆಂದು ಹೇಳುತ್ತೀರಿ. ನೀವು ಸ್ವಲ್ಪ ಸದನದ ನಿಯಮಾವಳಿಗಳನ್ನು ಅಭ್ಯಾಸ ಮಾಡಿಕೊಂಡು ಬಂದು ಸದುಪಯೋಗ ಮಾಡಿಕೊಂಡರೆ ನಾವು ಇನ್ನು ಹೆಚ್ಚು ಕೆಲಸವನ್ನು ನಿರ್ವಹಣೆ ಮಾಡಬಹುದು. ನಾನು ಮಂತ್ರಿಗಳಿಗೆ ಹೇಳಿದೆ, ಎಲ್ಲಾ ಸದಸ್ಯರಿಗೆ ಅವಕಾಶ ಕೊಟ್ಟುಬಿಡುತ್ತೇನೆ ಒಟ್ಟಿಗೆ ಉತ್ತರ ಕೊಡಿಯೆಂದು. ತಾವು ಭಾಷಣ ಮಾಡಬಾರದು, ಅದಕ್ಕೆ ಹೆಲ್ತ್ ಡಿಪಾರ್ಟ್‌ಮೆಂಟ್‌ನ ಡಿಮಾಂಡ್ಸ್ ಬರುತ್ತದೆ ಆಗ ಮಾಡಿ. ಅರ್ಥವಾಯಿತೇ, ವಿವರಣೆ ಕೇಳುವುದಕ್ಕೆ ಅಷ್ಟೇ ಸೀಮಿತವಾಗಬೇಕು. ನಿಯಮಾವಳಿ ಪ್ರಕಾರ ಮೂರು ಜನರಿಗಿಂತ ಹೆಚ್ಚಿಗೆ ಜನರು ಗಮನ ಸೆಳೆಯುವುದಕ್ಕೆ ಬರುವುದಿಲ್ಲ. ಆದರೂ ನಿಯಮಾವಳಿಗಳನ್ನು ಸಡಿಲಗೊಳಿಸಿ ವಿಷಯದ ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಂಡು ನಿಮಗೆ ಅವಕಾಶ ಕೊಡುತ್ತಿದ್ದೇನೆ. ನೀವು ನನಗೆ ಸಹಕಾರ ಕೊಡಬೇಕು. ಪ್ರತಿಯೊಬ್ಬರಿಗೂ ಕೂಡ ಭಾಷಣ ಮಾಡುವ ಚಪಲವಾದರೆ ಇಲ್ಲಿ ಕುಳಿತುಕೊಳ್ಳುವ ನನ್ನ ಸ್ಥಿತಿಯೇನು?

ಶ್ರೀ ಎನ್.ಯೋಗೀಶ್ ಭಟ್:- ಮಾನ್ಯ ಅಧ್ಯಕ್ಷರೆ, ನಾನು ಕೆಲವೇ ಅಂಶಗಳನ್ನು ಹೇಳುತ್ತೇನೆ. ಮೊಟ್ಟಮೊದಲನೆಯದಾಗಿ, ಪೂರ್ಣ ಪ್ರಮಾಣದ ಮಲೇರಿಯಾ ನಿಯಂತ್ರಣ ಘಟಕ, ರಾಷ್ಟ್ರೀಯ ಒಂದು ಕಾರ್ಯಕ್ರಮವಿದೆ. ಅದನ್ನು ಮಂಗಳೂರಿಗೆ ಸ್ಯಾಂಕ್ಷನ್ ಮಾಡುವ ರೀತಿಯಲ್ಲಿ ವಿಶೇಷ ಕಾಳಜಿಯನ್ನು ವಹಿಸಬೇಕು. ಈ ಬಗ್ಗೆ ಒಂದು ತಿಂಗಳ ಹಿಂದೆ ತಮ್ಮಲ್ಲಿ ಹಾಗೂ ಹೆಲ್ತ್ ಸೆಕ್ರೆಟರಿಯವರ ಗಮನವನ್ನು ಸೆಳೆದಿದ್ದೇನೆ. ಅರ್ಧಗಂಟೆ ಮುಕ್ತ ಚರ್ಚೆಯಿಂದ ಗಂಭೀರತೆಯನ್ನು ತಮ್ಮ ಗಮನಕ್ಕೆ ತಂದರೂ ಕೂಡ ಇವತ್ತಿನವರೆಗೂ ಕೂಡ ಅದು ಆಗಿಲ್ಲ. ಅದನ್ನು ಸೀರಿಯಸ್ಸಾಗಿ ಮಾಡಿಸಬೇಕೆಂದು ಹೇಳುತ್ತೇನೆ. ಅದರ ಜೊತೆಗೆ ಒಂದು ಸ್ಪೆಡ್ ಟೆಸ್ಟ್ ಮಾಡಿಕೊಂಡು ಆ ರೋಗ ಇದೆಯೋ ಇಲ್ಲವೋ ಎಂದು ಟೆಸ್ಟ್ ಮಾಡುವುದಕ್ಕೆ ಅರ್ಧಗಂಟೆ ಟೈಮ್ ಬೇಕಾಗುತ್ತದೆ. ಅದಕ್ಕೋಸ್ಕರ ಒಂದು ಅಡ್ವಾನ್ಸ್ ಆದ ಅತ್ಯಂತ ಆಧುನಿಕವಾದ ಸೂಕ್ಷ್ಮದರ್ಶಕ ಮತ್ತೆ ಫ್ಲೋರೋ ಸೆಂಟಿಕ್ ಟ್ಯೂಬ್ ಎಂದು ಹೇಳಿಕೊಂಡು ಬಹುಶಃ 2-3 ನಿಮಿಷಗಳಲ್ಲಿ ಆ ರೋಗವನ್ನು ಪತ್ತೆಹಚ್ಚುವಂತಹ ಒಂದು ವಿಧಾನ ಬಂದಿದೆ. ಅದನ್ನು ನಮ್ಮ ನಗರಕ್ಕೆ ತಾವು ಸ್ಯಾಂಕ್ಷನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ವಿಶೇಷವಾಗಿ ವೆನಲಾಕ್ ಆಸ್ಪತ್ರೆಯಲ್ಲಿ ಮಲೇರಿಯಾ ಒಂದು ವಾರ್ಡನ್ನು ಸ್ಯಾಂಕ್ಷನ್ ಮಾಡಬೇಕು. ಅದರಲ್ಲಿ ಪೂರ್ಣ ಪ್ರಮಾಣದ ಶುಶ್ರೂಷೆಯನ್ನು ಕೊಡುವಂತಹ ಒಂದು ವ್ಯವಸ್ಥೆಯನ್ನು ಸಹ ಮಾಡಬೇಕು. ಮತ್ತು ಮಂಗಳೂರು ಮಹಾನಗರಪಾಲಿಕೆಯಲ್ಲಿ 400ಜನ ಸಿಬ್ಬಂದಿಯ ಕೊರತೆಯಿದೆ. ಔಷಧಗಳನ್ನು ಸ್ಪೇ ಮಾಡುವ ಮತ್ತು ಶುಚಿತ್ವವನ್ನು ಕಾಪಾಡುವ ದೃಷ್ಟಿಯಲ್ಲಿ ಸಿಬ್ಬಂದಿಗಳ ನೇಮಕದ ಬಗ್ಗೆ ತಾವು ಆಜ್ಞೆಯನ್ನು ಕೊಡಬೇಕು. ಇದು ನಮ್ಮ ವಿಭಾಗಕ್ಕೆ ಬರುವುದಿಲ್ಲವೆಂದು ಹೇಳಿದರೂ ಕೂಡ. ನಮ್ಮ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಇದ್ದಾರೆ. ಅವರು ಆಜ್ಞೆಯ ಮೂಲಕ ತಕ್ಷಣ ಜಾರಿಗೆ ಬರುವ ರೀತಿಯಲ್ಲಿ ಕಾಳಜಿಯನ್ನು ವಹಿಸಬೇಕು. ಈಗಾಗಲೇ ಪಾರ್ಲಿಮೆಂಟಿನಲ್ಲಿ ಧನಂಜಯ ಕುಮಾರ್‌ರವರು ಇಸ್ಯುವನ್ನು ಮಾಡಿ, ಅಸ್ಕರ್ ಫರ್ನಾಂಡಿಸ್ ಕೂಡ ಈ ವಿಚಾರವನ್ನು ಎತ್ತಿದ್ದಾರೆ. ಆದರ ಪ್ರಯುಕ್ತ ಸೆಂಟ್ರಲ್ ಗೌರ್ನಮೆಂಟ್‌ನಿಂದ ಏನು ಏಡ್ಸ್ ಬರಬೇಕು ಅದು ಕೂಡ ಆಗುವ ರೀತಿಯಲ್ಲಿ ಅದು ನೀಫ್ಯರೀತಿಯಲ್ಲಿ ಬರುವಂತಹ ವಿಶೇಷ ಪ್ರಯತ್ನ ಮಾಡಬೇಕೆಂದು ತಮ್ಮನ್ನು ಪ್ರಾರ್ಥನೆ

ಮಾಡುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಶ್ರೀ ಎ.ರುಕ್ಮಯ್ಯಪೂಜಾರಿ:- ಸನ್ಮಾನ್ಯ ಅಧ್ಯಕ್ಷರೆ, ನನ್ನ ಜಿಲ್ಲೆಯ ಶಾಸಕಮಿತ್ರರು ಅತ್ಯಂತ ನೋವಿನಿಂದ ಮಾತನಾಡುತ್ತಿರಬೇಕಾದರೆ ಅದರ ಮಹತ್ವವನ್ನು ಸರ್ಕಾರ ತಿಳಿದುಕೊಳ್ಳುವ ಅಗತ್ಯವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಕೆಲವು ವರ್ಷಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಪೂರ್ತಿ ಮಲೇರಿಯಾ ರೋಗ ಹರಡಿತ್ತು. ಆಗ ಸರ್ಕಾರ ಗಮನಕೊಟ್ಟು ಪೂರ್ತಿ ನಿರ್ಮೂಲನವಾಗಿದೆ. ಒಂದು ವರ್ಷದ ಇತ್ತೀಚೆಗೆ ಅದು ಪುನಃ ಪ್ರಾರಂಭವಾಗಬೇಕಾದರೆ, ಸರ್ಕಾರ ತನ್ನ ಕರ್ತವ್ಯದಲ್ಲಿ ಸಂಪೂರ್ಣವಾಗಿ ಹಿಂದೆ ಸರಿದಿದೆಯೆಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಇದರ ಬಗ್ಗೆ ತಾವು ಪೂರ್ತಿ ಗಮನವನ್ನು ಕೊಡಬೇಕಾಗಿದೆ. ಇವತ್ತು ಈ ರೋಗ ನಗರಪ್ರದೇಶಗಳಲ್ಲಿ ಜಾಸ್ತಿಯಾಗಿ ಹಬ್ಬಿದೆ. ಅದು ಗ್ರಾಮಾಂತರ ಪ್ರದೇಶಗಳಿಗೂ ಕೂಡ ಹಬ್ಬುತ್ತಾ ಇದೆ. ಆ ದೃಷ್ಟಿಯಿಂದ ನಗರಪ್ರದೇಶಗಳಲ್ಲಿರತಕ್ಕ ಕೊಳಚೆಪ್ರದೇಶ ಜಾಗ ಏನಿದೆ ಅಲ್ಲಿ ಮಲೇರಿಯಾ ರೋಗ ನಿರೋಧಕ ಮದ್ದುಗಳನ್ನು ಆದಷ್ಟು ಒಂದು ಸಮರೋಪಾದಿಯಲ್ಲಿ ಸಿಂಪರಣೆ ಮಾಡಿ ಆ ರೋಗವನ್ನು ಸಂಪೂರ್ಣವಾಗಿ ನಾಶಮಾಡುವಂತಹ ದಿಕ್ಕಿನಲ್ಲಿ ಕೆಲಸ ಮಾಡುವಂತಹದ್ದು ಸರ್ಕಾರದ ಅಗತ್ಯವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುತ್ತಿಲ್ಲ. ಆದರೆ ಒಟ್ಟಿಗೆ ಇವತ್ತು ಮಲೇರಿಯಾ ರೋಗ ಪೀಡಿತರಾಗಿ ಸಾವನ್ನು ಅಪ್ಪಿದವರ ಸಂಖ್ಯೆ ಸುಮಾರು 25ರಷ್ಟು ಇದೆ. ಸಾವನ್ನಪ್ಪಿದವರು ಶ್ರೀಮಂತ ಕುಟುಂಬದಿಂದ ಬಂದಂತಹವರಲ್ಲ. ಸಾಮಾನ್ಯವಾಗಿ ಮಧ್ಯಮವರ್ಗ ಮತ್ತು ಬಡ ಕುಟುಂಬವರ್ಗದ ವ್ಯಕ್ತಿಗಳೇ ಇವತ್ತು ಸಾವನ್ನಪ್ಪಿದ್ದಾರೆ. ಆದೃಷ್ಟಿಯಿಂದ ಅವರ ತಪ್ಪಿನಿಂದ ಅವರು ಮರಣವನ್ನಪ್ಪಿದ್ದಲ್ಲ, ಸರ್ಕಾರ ತನ್ನ ಕರ್ತವ್ಯಲೋಪ ಮಾಡಿ ಇವತ್ತು ಅವರು ಮರಣವನ್ನಪ್ಪಿದ್ದಾರೆ. ಆವೊಂದು ಕಡೆಗೆ ಸರ್ಕಾರ ಗಮನಕೊಟ್ಟು ಯಾರು ಮಲೇರಿಯಾ ರೋಗ ಪೀಡಿತರಾಗಿ ಸಾವನ್ನಪ್ಪಿದ್ದಾರೆ ಅವರಿಗೆ ಸರ್ಕಾರ ಪರಿಹಾರವನ್ನು ಕೊಡುವಂತಹ ಕೆಲಸವನ್ನು ಮಾಡಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುವುದರ ಮೂಲಕ, ಖಂಡಿತವಾಗಿಯೂ ನಮ್ಮ ಜಿಲ್ಲೆಯಲ್ಲಿ ಇನ್ನು ಮುಂದೆ ಯಾವುದೇ ಪರಿಸ್ಥಿತಿ ಬಂದಾಗಲೂ ಈ ಮಲೇರಿಯಾ ರೋಗ ಪುನರಪಿ ಹಬ್ಬದಂತೆ ಶೀಘ್ರ ಗಮನಕೊಟ್ಟು ಪೂರ್ತಿ ಕೆಲಸ ಮಾಡಬೇಕು, ಆ ಬಗ್ಗೆ ಗಮನಕೊಡಬೇಕೆಂದು ನಾನು ಪುನ: ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

12.50 ಪಿ.ಎಂ.

ಡಾ॥ ಯು.ಚಿತ್ತರಂಜನ್:- ಸನ್ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಕೂಡ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಧನ್ಯವಾದಗಳು, ಇದರಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳು ಒಬ್ಬರೇ ಭಾಗವಹಿಸಿದರೆ ಸಾಲದು ಎನ್ನುವುದು ನನ್ನ ಖಚಿತ ಅಭಿಪ್ರಾಯ. ಹಾಗಾಗಿ ಸರ್ಕಾರದ ಎಲ್ಲಾ ಮಂತ್ರಿಗಳೂ ದಯವಿಟ್ಟು ಇದರ ಬಗ್ಗೆ, ಇದರ ಪರಿಸ್ಥಿತಿಯ ಗಂಭೀರತೆಯನ್ನು ಅರಿವು ಮಾಡಿಕೊಳ್ಳಬೇಕು. ಮಲೇರಿಯಾ ಅನ್ನುವಂಥ ಕಾಯಿಲೆ ಲುಸಿ ಅಥವಾ ಸೊಳ್ಳೆಗಳು ಕಚ್ಚುವುದರ ಮುಖಾಂತರ ಹರಡುತ್ತದೆ. ಸೊಳ್ಳೆಗಳನ್ನು ನಾಶ ಮಾಡುವಂಥಾದ್ದು ಆರೋಗ್ಯ ಮಂತ್ರಿಗಳ ಕೆಲಸ ಅಲ್ಲ. ಮಲೇರಿಯಾ ಕಾಯಿಲೆ ಬಂದವರನ್ನು ನಿವಾರಣೆ ಮಾಡುವಂಥಾದ್ದು; ಅದು ಬಾರದಿದ್ದ ಹಾಗೆ ಔಷಧಿ ಇದ್ದರೆ ಅದನ್ನು ಸಪ್ಲೈ ಮಾಡುವಂಥಾದ್ದು ಆರೋಗ್ಯ

ಮಂತ್ರಿಗಳಿಗೆ ಸಂಬಂಧಪಟ್ಟಂತಹ ವಿಷಯ. ಹಾಗಾಗಿ ಇಡೀ ಒಂದು ದಕ್ಷಿಣ ಕನ್ನಡ ಜಿಲ್ಲೆ, ತೀರ್ಥಹಳ್ಳಿ, ಚಿಕ್ಕಮಗಳೂರು, ಕಡೂರು, ತರೀಕೆರೆ, ಹೊಸನಗರ ಅನೇಕ ಕಡೆಗಳಲ್ಲಿ ಇವತ್ತು ಅಲ್ಲಿಯ ಶಾಸಕರು ಕೂಡ ಅದನ್ನು ಗಮನಿಸಿದ್ದಾರೆ. ಈ ಕಡೆ ಮಲೇರಿಯಾ ರೋಗ ಹರಡಿದೆ. ಇದನ್ನು ನಿವಾರಣೆ ಮಾಡಲಿಕ್ಕೆ ಪರಿಶೀಲನೆ ಮಾಡುತ್ತೇನೆ, ನೋಡುತ್ತೇನೆ ಅನ್ನುವ ಭರವಸೆ ದಯವಿಟ್ಟು ಕೊಡಬೇಡಿ. ನಿರ್ದಿಷ್ಟವಾದಂಥ ಕಾರ್ಯಕ್ರಮಗಳನ್ನು ನೀವು ಮಾಡಿ ಎಂದು ಹೇಳಿ ನಿಮ್ಮನ್ನು ಒತ್ತಾಯ ಮಾಡುತ್ತೇನೆ. ಮತ್ತೆ ಮಾನ್ಯ ಆರೋಗ್ಯ ಮಂತ್ರಿಗಳಿಗೆ ಅವರು ಕೊಟ್ಟಂತಹ ಮಾಹಿತಿಗಳು ಏನು ಇವೆ, ಇದು ಸತ್ಯಕ್ಕೆ ದೂರವಾಗಿವೆ ಎಂದು ಹೇಳಿ ಬಹಳ ದುಃಖದಿಂದ ನಾನು ಹೇಳಬೇಕಾಗುತ್ತದೆ. ವೆನ್‌ಲಾಕ್ ಆಸ್ಪತ್ರೆಯಲ್ಲಿ ಇವತ್ತು ಮಲೇರಿಯಾ ಕಾಯಿಲೆ ತುಂಬ ಹರಡಿದೆ. ಅಲ್ಲಿರುವಂಥ ವೈದ್ಯಕೀಯ ವಿದ್ಯಾರ್ಥಿಗಳು, ಅಲ್ಲಿರುವಂಥ ಡಾಕ್ಟರುಗಳು, ಅಲ್ಲಿರುವಂಥ ನರ್ಸುಗಳು ಎಲ್ಲರಿಗೂ ಮಲೇರಿಯಾ ಬಂದಿದೆ. ಬಹುಶಃ ನಾಳೆ ದಿವಸ ಡಾಕ್ಟರು ಮತ್ತು ನರ್ಸುಗಳು ಬಿಟ್ಟು ಹೋದರೆ ಆಶ್ಚರ್ಯ ಆಗಲಿಕ್ಕಿಲ್ಲ. ಕುಮಾರಿ ಶಹಾನಿ ಬಿ.ಎಸ್‌ಸಿ. (ನರ್ಸಿಂಗ್), she is from Ernakulam. she died on 16th August at wenlock Hospital ಇದು ತಮ್ಮ ಗಮನಕ್ಕೆ ಬಂದಿದೆಯೇ? ಒಬ್ಬ ನರ್ಸಿಂಗ್ ಕಲಿಯುವಂಥ ವಿದ್ಯಾರ್ಥಿನಿ ಅಲ್ಲಿ ಸತ್ತಿದ್ದಾಳೆ. ಇನ್ನೊಂದು ತಮ್ಮಲ್ಲಿ ಹೇಳುತ್ತಿದ್ದೇನೆ. ರವಿ ಮತ್ತು ಪ್ರಭಾಕರ ಎನ್ನುವವರು ಆಗಸ್ಟ್ 22ನೇ ತಾರೀಖಿನ ದಿವಸ ಅವರು ವೆನ್‌ಲಾಕ್ ಹಾಸ್ಪಿಟಲ್‌ಗೆ ಅಡ್ಮಿಟ್ ಆಗಿದ್ದಾರೆ. ಸ್ವಾಮಿ, ನಿಮ್ಮ ಆಸ್ಪತ್ರೆಯಲ್ಲಿ ಮಧ್ಯಾಹ್ನದ ಮೇಲೆ ರಕ್ತ ಪರೀಕ್ಷೆ ಮಾಡುವಂಥ ವ್ಯವಸ್ಥೆ ಇಲ್ಲ. ಒಂದು ಸಾವಿರ ಬೆಡ್ ಇರುವಂಥ ಆಸ್ಪತ್ರೆಯಲ್ಲಿ ಒಬ್ಬ ಟೆಕ್ನೀಷಿಯನ್ ಇದ್ದಾನೆ. 80-90 ಸ್ಲೈಡ್‌ಗಳನ್ನು ಕೊಟ್ಟರೆ ಅವನು ಏನು ಪರೀಕ್ಷೆ ಮಾಡುತ್ತಾನೆ. ನಿಮಗೆ ಸಮರೋಪಾದಿಯಲ್ಲಿ ಅಲ್ಲಿ ಹತ್ತು ಟೆಕ್ನೀಷಿಯನ್ಸ್ ಒದಗಿಸಲಿಕ್ಕೆ ಆಗುವುದಿಲ್ಲ, ಏನು ಮಾಡುತ್ತಿದ್ದೀರಿ? 22ನೇ ತಾರೀಖು ಮಧ್ಯಾಹ್ನ ಅಡ್ಮಿಟ್ ಮಾಡಿದ್ದಾರೆ, ಅಲ್ಲಿ ಸ್ಲೈಡ್ ತೆಗೆಯುವಂಥ ವ್ಯವಸ್ಥೆ ಇಲ್ಲ. ಖಾಸಗಿ ನರ್ಸಿಂಗ್ ಹೋಂಗೆ ಆ ಸ್ಲೈಡನ್ನು ಕಳುಹಿಸಿ ಕೊಟ್ಟರು. 24ರಿಂದ 32ತಾಸುಗಳು ಬೇಕಾಗುತ್ತದೆ, ಖಾಸಗಿ ನರ್ಸಿಂಗ್ ಹೋಂಗೆ ಹೋಗುವುದು, ಬರುವುದು ಇದಕ್ಕೆ. ಮಲೇರಿಯಾ ಪಾಸಿಟೀವ್ ಅಂತ ಹೇಳಿ 24ನೇ ತಾರೀಖು ಸ್ಲೈಡಿನ ರಿಪೋರ್ಟ್ ಬಂತು, 23ನೇ ತಾರೀಖು ಮಧ್ಯಾಹ್ನ 3.00 ಗಂಟೆಗೆ ರವಿ ಮತ್ತು ಪ್ರಭಾಕರ ಸ್ವರ್ಗಕ್ಕೆ ಸೇರಿದರು. ತಾವು ದಯವಿಟ್ಟು ಇದನ್ನು ಎನ್‌ಕ್ವೈರಿ ಮಾಡಿ. ಈ ಬಗ್ಗೆ ವಿಚಾರಣೆ ಆಗಬೇಕು ಸನ್ಮಾನ್ಯ ಅಧ್ಯಕ್ಷರೇ. ಇದು ನಡೆದದ್ದು ಹೌದೇ ಇಲ್ಲವೇ ಅನ್ನುವಂಥಾದ್ದರ ಬಗ್ಗೆ ವಿಚಾರಣೆ ಆಗಬೇಕು. ನಾನು ಒತ್ತಿ ಹೇಳುತ್ತೇನೆ, ಇವತ್ತು ಆರೋಗ್ಯ ಇಲಾಖೆಯಿಂದ ವೆನ್‌ಲಾಕ್ ಆಸ್ಪತ್ರೆಗೆ ಎಲ್ಲೆಲ್ಲಿ ಡಾಕ್ಟರುಗಳು ಇದ್ದಾರೆ you rush them there. Also rush technicians. ಅಲ್ಲಿ ಟೆಕ್ನೀಷಿಯನ್ಸ್ ಸಾಕಷ್ಟು ಬೇಕು. ರಕ್ತ ಪರೀಕ್ಷೆ ಮಾಡುವಂಥ ಪ್ರಾಥಮಿಕ ವ್ಯವಸ್ಥೆ ಇಷ್ಟು ದೊಡ್ಡ ಆಸ್ಪತ್ರೆಯಲ್ಲಿ ಇಲ್ಲ ಸ್ವಾಮಿ. ಇವತ್ತು ಏನು ಸುಳ್ಯದಿಂದ ಹೇಳಿದರು, ಮತ್ತೆ ಸುಬ್ರಮಣ್ಯದಿಂದ ಹೇಳಿದರು, ಸುಬ್ರಮಣ್ಯದಲ್ಲಿ ಮೂರು ಸಾವುಗಳಾಗಿದೆ ಎಂದು ಹೇಳಿ ಎಲ್ಲಾ ಪತ್ರಿಕೆಯಲ್ಲಿ ಬಂದಿದೆ. ನಾಲ್ಕು ವರ್ಷದ ಮಗಳು ಕೂಲಿ ಕಾರ್ಮಿಕನ ಮಗಳು without proper treatment she died in the hospital. ಎಂದು ಹೇಳುವಂಥ ಸುದ್ದಿ ಬಂದಿದೆ. ಮಲೇರಿಯಾದಿಂದ ಎಲ್ಲೆಲ್ಲಿ ಎಫೆಕ್ಟ್ ಆಗಿದೆ, ಅಲ್ಲಿ ನೀವು ನಿಮ್ಮ ರೋಸ್ಟರ್ ಸಿಸ್ಟಮ್ ಅಥವಾ ಇನ್ನು ಯಾವುದೋ ಕಾಂಟ್ರಾಕ್ಟ್ ಏನಾದರೂ ಮಾಡಿ, ಎಲ್ಲಿಂದ

ಆದರೂ, ಬೆಂಗಳೂರಿನಲ್ಲಿ ನೂರಾರು ಡಾಕ್ಟರುಗಳು ಜಾಸ್ತಿ ಇದ್ದಾರೆ, ಅವರನ್ನು ಸ್ವಲ್ಪ ಒಂದು ಮೂರು ತಿಂಗಳು ಅವಧಿಗೆ ಅಲ್ಲಿ ಕಳುಹಿಸುವಂಥ ಕೆಲಸ ಮಾಡಿ. ಕಾಂಟ್ರಾಕ್ಟ್ ಪದ್ಧತಿಯಲ್ಲಿ ಟೆಕ್ನೀಷಿಯನ್ ಅಪಾಯಿಂಟ್ ಮಾಡುವಂಥ ಕೆಲಸ ಮಾಡಿ. ಇವತ್ತು 160 ಟೆಕ್ನೀಷಿಯನ್ ಶಾರ್ಟೇಜ್ ಇದೆ. ಇವತ್ತು ಎಲ್ಲೆಲ್ಲಿ ಮಲೇರಿಯಾ ಇದೆ, ದಯವಿಟ್ಟು ಅಲ್ಲಿಯಾದರೂ ಒಂದು ಟೆಕ್ನೀಷಿಯನ್ ಕೊಡುವಂಥ ವ್ಯವಸ್ಥೆ ಮಾಡಿ. ಇನ್ನೊಂದು, malaria treatment is not difficult. It is very simple. ನೀವು ಕ್ಲೋರೋಫಿನ್ ಅನ್ನು ಅವರಿಗೆ ಕೊಡಿ. ಆಮೇಲೆ ಕ್ಲೋರೋಫಿನ್‌ನಿಂದ ಹತೋಟಿ ಬಂದ ಮೇಲೆ ನೀವು ಅವರಿಗೆ ಕೊಡಬೇಕಾಗುವುದು ಪ್ರೈಮಾಕ್ವಿನ್. ಇದು ಎರಡೂ ಔಷಧಿಗಳಿಂದ ನೀವು ಅದನ್ನು ಕಂಟ್ರೋಲ್ ಮಾಡಲಿಕ್ಕೆ ಆಗುತ್ತದೆ. ಎಷ್ಟರಮಟ್ಟಿಗೆ ಅಸಹಾಯಕತೆ ನಮ್ಮ ಸರ್ಕಾರದ್ದು ಎಂದು ಹೇಳಿದರೆ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸಾಕಷ್ಟು ಕ್ಲೋರೋಫಿನ್ ಮತ್ತು ಪ್ರೈಮಾಕ್ವಿನ್ ಸರಬರಾಜು ಇಲ್ಲ. ಕೇಳಿದರೆ ಇದೆ ಎನ್ನುವಂಥ ಸ್ಟೇಟ್‌ಮೆಂಟ್‌ಗಳನ್ನು ಮಂತ್ರಿಗಳು ಕೊಡುತ್ತಾರೆ. ಹತ್ತಿರದ ಉಲ್ಲಾಳದ ಅನೇಕ ಪ್ರೈಮರಿ ಹೆಲ್ತ್ ಸೆಂಟರ್‌ಗಳಲ್ಲಿ ಹುಗಿಯುವಷ್ಟು ಕ್ಲೋರೋಫಿನ್ ಪ್ರೈಮಾಕ್ವಿನ್ ಇದೆ. ಪ್ರೈಮಾಕ್ವಿನ್ ಅನ್ನು ಬಿಸಾಡಿದರೆ ಇದರಿಂದ ರೆಸಿಸ್ಟೆನ್ಸ್ ಬರುತ್ತದೆ. ಅದಕ್ಕೋಸ್ಕರ ಇನ್‌ಸ್ಟ್ರಕ್ಷನ್ಸ್ ಉಂಟು. ಮೂರು ಅಡಿ ಮಣ್ಣಿನಲ್ಲಿ ಹುಗಿದು ಅದನ್ನು ಡಿಸ್ಪ್ಯಾಯ್ ಮಾಡಬೇಕು. ಅಂತ ಹೇಳಿ, ಡೇಟ್ ಎಕ್ಸ್‌ಪೈರಿ ಆಗಿ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಪ್ರೈಮಾಕ್ವಿನ್ ಮತ್ತು ಕ್ಲೋರೋಫಿನ್‌ಅನ್ನು ಬಿಸಾಡುತ್ತಿದ್ದಾರೆ ಡಾಕ್ಟರುಗಳು. ನಿಮಗೆ ಇಷ್ಟು ಮಾಡುವುದಕ್ಕೆ ಆಗುವುದಿಲ್ಲವೆ. can't you coordinate between the hospitals? where there is no supply, go to PHCs, get chlorophin and primaquin and supply them to Wenlock Hospital. This primary thing is not being done by the medical department. I am very sorry to state this. ಇನ್ನೊಂದು ಮೆಫ್ಲೋಕ್ವಿನ್ ಅನ್ನುವಂಥ ಒಂದು ಲೈಫ್ ಸೇವಿಂಗ್ ಡ್ರಗ್ ಇದೆ. ಅದು ನಿಮ್ಮ ಹತ್ತಿರ ಸ್ಟಾಕ್ ಇದೆಯೇ? ಒಂದು ಸಾವಿರ ರೂಪಾಯಿ ಆಗುತ್ತದೆ ಒಬ್ಬನನ್ನು ಸೇವ್ ಮಾಡಲಿಕ್ಕೆ. ಇದರಲ್ಲಿ ವೈವ್ಯಾಕ್ಸ್ ಮತ್ತು ಇನ್ನೊಂದು ಎಫ್ಪಾಸಿಫಾರಂ ಅಂತ ಹೇಳಿ ಎರಡು ರೀತಿಯಾದಂಥ ಮಲೇರಿಯಾ ಇದೆ. ವೈವ್ಯಾಕ್ಸ್ ಹೆಚ್ಚಾಗಿ ಇರುತ್ತದೆ. ಸೆರಬ್ರಲ್ ಮಲೇರಿಯಾ ಅಂತ ಹೇಳಿದರೆ ಮೆದುಳಿನಲ್ಲಿ ಇರುವಂಥ ರಕ್ತನಾಳಗಳು ಈ ಮಲೇರಿಯಾ ರೋಗಾಣುಗಳಿಂದ ಫ್ರಾಜೈಲ್ ಆಗಿ ಒಡೆದು ಕೂಡಲೇ ಸಾವನ್ನು ಅಪ್ಪುತ್ತಾರೆ. ಇಂಥ ಒಂದು ಗಂಭೀರ ಪರಿಸ್ಥಿತಿ ಇರುವಂಥ ಸಂದರ್ಭದಲ್ಲಿ ದಯವಿಟ್ಟು ನೀವು ಡಾಕ್ಟರುಗಳನ್ನು ಅಲ್ಲಿಗೆ ಪೋಸ್ಟ್ ಮಾಡಬೇಕು. ಟೆಕ್ನೀಷಿಯನ್ಸ್‌ಗಳನ್ನು ಪೋಸ್ಟ್ ಮಾಡಬೇಕು, ಆಕ್ಷನ್ ಕಮಿಟಿಗಳನ್ನು ಮಾಡಬೇಕು. ಅದರಲ್ಲಿ ಡಿ.ಸಿ. ಇರಬೇಕು, ಕಾರ್ಪೊರೇಷನ್ ಕಮೀಷನ್‌ರವರು ಇರಬೇಕು. ಡಿ.ಹೆಚ್.ಓ. ಇರಬೇಕು. ಸಮಗ್ರವಾಗಿ ಅಲ್ಲಿ ಏನು ಸೊಳ್ಳೆಗಳು ಇವೆ, ಅವುಗಳನ್ನು ನಿರ್ಮೂಲನ ಮಾಡುವಂಥ ಕೆಲಸಗಳು ಆಗಬೇಕು. ಆಮೇಲೆ ಎಲ್ಲೆಲ್ಲಿ ಮಲೇರಿಯಾ ಇರುವಂಥ ಆಸ್ಪತ್ರೆಗಳು ಇವೆ ಅಲ್ಲಿ ನೀವು ಐಸೊಲೇಷನ್ ವಾರ್ಡ್ ಅಥವಾ ಮಸ್ಕಿಟೋ ಕರ್ಟನ್ನುಗಳನ್ನು ಪೂರೈಸುವಂಥ ಕೆಲಸ ಮಾಡಿ. ಇವತ್ತು ವೆನ್‌ಲಾಕ್ ಆಸ್ಪತ್ರೆಯಂಥ ದೊಡ್ಡ ಮಂಗಳೂರು ಸಿಟಿ ಆಸ್ಪತ್ರೆಯಲ್ಲಿ ಡಾಕ್ಟರುಗಳು ಮತ್ತು ನರ್ಸುಗಳು ಕೆಲಸ ಮಾಡಲಿಕ್ಕೆ ಹೆದರುತ್ತಿದ್ದಾರೆ. ಸ್ವಾಮಿ, ನನ್ನ ಭಟ್ಕಳದಿಂದ ಇವತ್ತು ದಕ್ಷಿಣ

ಕನ್ನಡದ ಬಗ್ಗೆ ಏಕೆ ನಾನು ಮಾತನಾಡುತ್ತಿದ್ದೇನೆ ಎಂದರೆ ನಾನು ಬಹಳ ಹತ್ತಿರ ಇದ್ದೇನೆ. ಭಟ್ಕಳದಿಂದ ಒಂದು ಹೆಣ್ಣು ಮಗಳನ್ನು ವೆನ್‌ಲಾಕ್ ಆಸ್ಪತ್ರೆಗೆ ಮೆದುಳಿನ ಆಪರೇಷನ್‌ಗೆ ಕಳುಹಿಸಿ ಕೊಟ್ಟೆ. ಸುಬ್ಬಯ್ಯ ಅನ್ನುವಂಥ ಕೂಲಿ ಕಾರ್ಮಿಕನ ಮಗಳು. ಬೈನ್ ಆಪರೇಷನ್ ಅವಳಿಗೆ ಆಯಿತು. ಅವಳೇನೋ ಬದುಕಿದಳು. ಅವಳ ಶುಶ್ರೂಷೆಗೆ ಹೋದಂಥ ಅವಳ ತಾಯಿ, ಅವಳಿಗೆ ಮಲೇರಿಯಾ ಬಂತು. ಅವಳು ವಾಪಸ್ಸು ಬಂದಳು. ತಾಯಿ ವಾಪಸ್ಸು ಬಂದಳು, ಮಗನನ್ನು ಕಳುಹಿಸಿ ಕೊಟ್ಟಳು, ಮಗನೂ ವೆನ್‌ಲಾಕ್ ಆಸ್ಪತ್ರೆಗೆ ಹೋದ. ಅವನಿಗೆ ಮಲೇರಿಯಾ ಬಂತು, ಅವನು ವಾಪಸ್ಸು ಬಂದ, ತಂದೆ ಹೋದ, ಅವನಿಗೂ ಮಲೇರಿಯಾ ಬಂತು, ಅವನೂ ವಾಪಸ್ಸು ಬಂದ. ಇಂಥ ಪರಿಸ್ಥಿತಿ ಇರುವಾಗ ಇದರ ಗಂಭೀರತೆಯನ್ನು ಅರ್ಥಮಾಡಿಕೊಂಡು ತಾವು ಕೆಲಸ ಮಾಡಬೇಕಾಗಿದೆ. ಮಾನ್ಯ ಆರೋಗ್ಯ ಸಚಿವರು ಇತರ ನಗರಾಭಿವೃದ್ಧಿ ಸಚಿವರು ಯಾರು ಬೇಕೋ ಅವರೊಟ್ಟಿಗೆ ದಯವಿಟ್ಟು ನಾಳೆಯೇ ಹೋಗಿ ನೀವು, ಮಾನ್ಯ ಅಧ್ಯಕ್ಷರೇ, ಅವರಿಗೆ ಪರವಾನಗಿ ಕೊಡಿ. ಹೋಗಿ ಮಂಗಳೂರು, ಸುಳ್ಯ ಆ ಭಾಗವನ್ನು ಸಂದರ್ಶನ ಮಾಡಿ ಅಲ್ಲಿ ಜನರ ಅಹವಾಲನ್ನು ಕೇಳಿ ಅಲ್ಲಿರುವಂಥ ಪ್ರೈವೇಟ್ ಇನ್ಸ್‌ಟಿಟ್ಯೂಷನ್ಸ್, ಅವರೇ ಮುಂದೆ ಬಂದು one particular doctor has referred 1000 slides. ಒಂದು ಸಾವಿರ ಸ್ಲೈಡುಗಳನ್ನು ಕಳುಹಿಸವಂಥಾದ್ದು ಒಂದು ಜನರಲ್ ಪ್ರಾಕ್ಟೀಷನರ್ ಮಾಡುವಾಗ, ಅದರ ಗಂಭೀರತೆಯನ್ನು ನೀವು ಅರ್ಥಮಾಡಿಕೊಳ್ಳಿ. ಅಲ್ಲಿರುವಂಥ ಜನರೇ ಸ್ವಯಂ ಇಚ್ಛೆಯಿಂದ ಕೆಲಸ ಮಾಡುತ್ತಿದ್ದಾರೆ. ಇಷ್ಟಾದರೂ ಸರ್ಕಾರ ನಿದ್ರೆ ಮಾಡುತ್ತಿದೆಯಲ್ಲ. ದಯವಿಟ್ಟು ಮಾನ್ಯ ಆರೋಗ್ಯ ಮಂತ್ರಿಗಳು ಇಡೀ ಸರ್ಕಾರದ ಸಹಾಯವನ್ನು ತೆಗೆದುಕೊಂಡು ನಾನು ಏನು ಹೇಳಿದ್ದೇನೆ ಅದನ್ನು ಒದಗಿಸಬೇಕು ಎಂದು ಹೇಳಿ ತಮ್ಮ ಗಮನವನ್ನು ಸೆಳೆಯಲಿಕ್ಕೆ ನಾನು ಇಚ್ಛಿಪಡುತ್ತೇನೆ.

(ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಅಧ್ಯಕ್ಷ ಪೀಠದಲ್ಲಿದ್ದರು)

ಡಾ.ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮದ ಅಡಿಯಲ್ಲಿ ದೇಶದಿಂದ ಕೆಲವು ವರ್ಷಗಳವರೆಗೆ ಮಲೇರಿಯಾ ರೋಗವನ್ನು ಮೂಲೋತ್ಪಾಟನೆ ಮಾಡಲಿಕ್ಕೆ ಸಾಧ್ಯವಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಲೇರಿಯಾ ರೋಗವು ಮತ್ತೆ ರಾಷ್ಟ್ರಕ್ಕೆ ವಾಪಸ್ಸು ಬಂದಿದ್ದು ಅತ್ಯಂತ ಆತಂಕಕಾರಿಯಾದಂಥ ವಿಚಾರವಾಗಿದೆ. 1992ರಿಂದ ರಾಜ್ಯದಲ್ಲಿ ಮಲೇರಿಯಾ ಪೀಡಿತರ ಸಂಖ್ಯೆ ಹೆಚ್ಚಾಗುತ್ತಿದೆ. ಇಂಥ ಒಂದು ಸಂದರ್ಭದಲ್ಲಿ ರಾಜ್ಯದ ಸುಮಾರು 6 ಜಿಲ್ಲೆಗಳಲ್ಲಿ ಮಲೇರಿಯಾವನ್ನು ಕಾಣಲಿಕ್ಕೆ ಸಾಧ್ಯವಾಗಿದೆ. 1995-96ನೇ ಸಾಲಿನಲ್ಲಿ ಮಲೇರಿಯಾ ನಿರ್ಮೂಲನಾ-ಮಾಡಲಿಕ್ಕಾಗಿ ರಾಜ್ಯ ಸರ್ಕಾರ ಏನು ಹಿಂದೆ 1993-94, 1994-95ರಲ್ಲಿ ಇದ್ದಂಥ 9 ಕೋಟಿ ರೂಪಾಯಿಗಳ ಬಜೆಟ್ಟಿಗೆ ಮಿಗಿಲಾಗಿ 17 ಕೋಟಿ ರೂಪಾಯಿಗಳನ್ನು ಈ ಸಾರಿ ನಾವು, ಮಲೇರಿಯಾ ನಿರ್ಮೂಲನ ಮಾಡಲಿಕ್ಕೆ ಆಯವ್ಯಯದಲ್ಲಿ ಹಣವನ್ನು ಒದಗಿಸಿದ್ದೇವೆ. ಇದರಲ್ಲಿ ಶೇ.50ರಷ್ಟು ಕೇಂದ್ರ ಸರ್ಕಾರದಿಂದ ಔಷಧಿ ಮತ್ತು ಯಂತ್ರೋಪಕರಣಗಳ ರೂಪದಲ್ಲಿ ರಾಜ್ಯಕ್ಕೆ ಅವರು ಕೊಡುತ್ತಿದ್ದಾರೆ. ಮಂಗಳೂರು ಅಷ್ಟಕ್ಕೇ ಈ ಒಂದು ಮಲೇರಿಯಾ ಸೀಮಿತವಾಗದೇ ರಾಜ್ಯದ ಸುಮಾರು ಐದರಿಂದ ಆರು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಈ ಒಂದು ಮಲೇರಿಯಾ ಕಾಣುತ್ತಿದೆ. ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಗರಸಭೆ ಮತ್ತು ಸ್ಥಳೀಯವಾದಂಥ ಸಂಘಸಂಸ್ಥೆಗಳು ಮಲೇರಿಯಾ

ನಿಯಂತ್ರಣದಲ್ಲಿ ಸಕ್ರಿಯವಾದಂಥ ಪಾತ್ರವನ್ನು ವಹಿಸುತ್ತಿವೆ. ಈಗಾಗಲೇ ನಾನು ಹೇಳಿದ್ದೇನೆ, ಈ ಕ್ಲೋರೋಫಿನ್ ಮತ್ತು ಪೈಮಾಕ್ವಿನ್ ಅಂಥ ಔಷಧಿಗಳನ್ನು ಒದಗಿಸಬೇಕು ಎಂದು. ಔಷಧಿಗಳನ್ನು ಒದಗಿಸಲು ಏನೂ ತೊಂದರೆ ಇಲ್ಲ. ಎಷ್ಟು ಔಷಧಿ ಬೇಕು. ಕೊಡಲಿಕ್ಕೆ ಸಿದ್ಧನಿದ್ದೇನೆ. ಈಗಾಗಲೇ ಮಾನ್ಯ ಸದಸ್ಯರುಗಳು ವ್ಯಕ್ತಮಾಡಿದ ಹಾಗೆ ಒಳಚರಂಡಿ ಕೆಲಸ ಮಾಡತಕ್ಕಂಥಾದ್ದು, ಗುಂಡಿ ತೆಗೆಯತಕ್ಕಂಥಾದ್ದು, ರಸ್ತೆ ನಿರ್ಮಾಣ ಮಾಡತಕ್ಕಂಥಾದ್ದು ಆರೋಗ್ಯ ಇಲಾಖೆಯ ಕೆಲಸ ಅಲ್ಲ. ಆದರೂ ಜನರನ್ನು ಈ ಮಲೇರಿಯಾ ರೋಗದಿಂದ ಸಂರಕ್ಷಣೆ ಮಾಡತಕ್ಕಂಥಾದ್ದು ಸರ್ಕಾರದ ಕರ್ತವ್ಯ ಆಗಿರುವುದರಿಂದ ಕಳೆದ ಮೂರು ತಿಂಗಳ ಹಿಂದೆ ನಾನು ಪಿ.ಡಬ್ಲ್ಯು.ಡಿ. ಇಲಾಖೆಯವರನ್ನು, ನೀರಾವರಿ ಇಲಾಖೆಯವರನ್ನು ಮತ್ತು ಅರಣ್ಯ ಇಲಾಖೆಯವನ್ನು, ಅರ್ಬನ್ ಡೆವೆಲಪ್‌ಮೆಂಟ್, ಮುನಿಸಿಪಾಲಿಟಿ, ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳ ಒಂದು ಸಭೆಯನ್ನು ಕರೆದು ಸಮಗ್ರವಾಗಿ ಚರ್ಚೆಯನ್ನು ಮಾಡಿದ್ದೇನೆ. ರೋಗ ನಿಯಂತ್ರಣ ಮಾಡುವಲ್ಲಿ ಆರೋಗ್ಯೇತರ ಇಲಾಖೆಗಳ ಪಾತ್ರ ಮತ್ತು ಕರ್ತವ್ಯ ಏನು ಅನ್ನತಕ್ಕಂಥಾದನ್ನು ಆ ಇಲಾಖೆಯಲ್ಲಿ ನಾನು ಚರ್ಚೆ ಮಾಡಿದ್ದೇನೆ. ಗ್ರಾಮಾಣಾಭಿವೃದ್ಧಿ ಇಲಾಖೆಯು ಶುದ್ಧ ಕುಡಿಯುವ ನೀರನ್ನು ಮತ್ತು ಪರಿಸರವನ್ನು ಕಾಪಾಡಿಕೊಳ್ಳುವುದಕ್ಕೆ ಮಾಡಬೇಕಾದಂಥ ಕಾರ್ಯಕ್ರಮಗಳ ಬಗ್ಗೆ ನಾನು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಿಗೆ ತಿಳಿಸಿದ್ದೇನೆ. ಈಗ ಎಲ್ಲಾ ಕಾರ್ಪೋರೇಷನ್‌ಗಳಲ್ಲೂ ಆಡಳಿತಾಧಿಕಾರಿಗಳು ಇದ್ದಾರೆ. ಹೆಚ್.ಯು.ಡಿ.ಯವರ ಮುಖಾಂತರ ಏನು ಕಾರ್ಪೊರೇಷನ್ ಬೈಲಾವನ್ನು ಅಡಾಪ್ಟ್ ಮಾಡಿಕೊಳ್ಳುವಂಥ ಸಂದರ್ಭದಲ್ಲಿ ನಾನು ಪತ್ರವನ್ನು ಬರೆಯುತ್ತಿದ್ದೇನೆ. ಆರೋಗ್ಯ ಇಲಾಖೆಯು ಒದಗಿಸತಕ್ಕಂಥ ಔಷಧೋಪಚಾರದ ಜೊತೆಗೆ ಅವರ ಕರ್ತವ್ಯ ಮತ್ತು ಜನತೆಯ ಜವಾಬ್ದಾರಿ ಮತ್ತು ಕರ್ತವ್ಯ ಕೂಡ ಈ ಬೈಲಾನಲ್ಲಿ ಬರುವುದರಿಂದ ಈ ಬೈಲಾವನ್ನು ಕಡ್ಡಾಯವಾಗಿ ಮಾಡಿಕೊಳ್ಳುವ ಅನಿವಾರ್ಯತೆ ಇದೆ. ಇವತ್ತು ಯಾವುದೇ ಸಾಂಕ್ರಾಮಿಕ ರೋಗರುಜಿನಗಳು ಇರಬಹುದು, ಮತ್ತು ಮಲೇರಿಯಾದಂಥ ರೋಗಗಳಿಂದ ಜನಸಾಮನ್ಯರನ್ನು ಸಂರಕ್ಷಣೆ ಮಾಡತಕ್ಕಂಥಾದ್ದು ಎಲ್ಲರ ಸಂಯುಕ್ತ ಜವಾಬ್ದಾರಿಯಾಗಿದೆ. ಟೆಕ್ನಿಶಿಯನ್ಸ್ ಇಲ್ಲ, ವೈದ್ಯರು ಇಲ್ಲ ಎನ್ನುವಂಥ ಕೊರಗನ್ನು ಮಾನ್ಯ ಸದಸ್ಯರು ವ್ಯಕ್ತಮಾಡಿದ್ದಾರೆ. ನಾನು ಅಧಿಕಾರದಲ್ಲಿ ಬಂದಂಥ ಸಂದರ್ಭದಲ್ಲಿ, ನಮ್ಮ ಸರ್ಕಾರ ಬಂದಮೇಲೆ ಈ ರೋಗದ ತೀವ್ರತೆಯನ್ನು ಗಮನಿಸಿ ಸುಮಾರು 150 ಟೆಕ್ನಿಶಿಯನ್ಸ್‌ನ್ನು ಒದಗಿಸಬೇಕೆಂದು ಹೇಳಿ ನನಗೆ ಸಚಿವಸಂಪುಟ ಅನುಮತಿಯನ್ನು ಕೊಟ್ಟಿದೆ. ಅಂತಹ ಸಂದರ್ಭದಲ್ಲಿ ಲಭ್ಯವಿರತಕ್ಕಂಥ ಟೆಕ್ನಿಶಿಯನ್ಸ್‌ನ್ನು ನೇಮಕ ಮಾಡಿಕೊಳ್ಳುವುದರ ಜೊತೆಗೆ ಇನ್ನೊಂದು ವಾರದಲ್ಲಿ ರೋಸ್ಟರ್ ಸಿಸ್ಟಮ್ ಕ್ಲಿಯರ್ ಆಗುತ್ತಿದೆ. ತಾವು ಕಳೆದಸಾರಿ ಕೂಡ ಹೇಳಿದ್ದೀರಿ. ಈಗ ಎ ಮತ್ತು ಬಿ ನಲ್ಲಿ 50 ಪರ್ಸೆಂಟ್ ಯಾವ್ಯಾವ ಕ್ಯಾಟಗರಿಯಲ್ಲಿ ತೆಗೆದುಕೊಳ್ಳಬೇಕೆಂದು ಮುಂದಿನ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ಈ ಹುದ್ದೆಗಳನ್ನು ತುಂಬುವುದಕ್ಕೆ ಪ್ರಯತ್ನಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯಸದಸ್ಯರಾದ ಡಾ॥ ಚಿತ್ತರಂಜನ್ ಅವರು ಚೆನ್ನಾಗಿ ಹೇಳಿದ್ದಾರೆ. ಅಲ್ಲಿ ರಕ್ತ ಪರೀಕ್ಷೆ ಮಾಡುವುದಕ್ಕೆ ಬೇಕಾದಂಥ ಸಿಬ್ಬಂದಿ ಒಬ್ಬನೇ ಇದ್ದಾನೆ, ಅವನಿಂದ ಇದು ಆಗುತ್ತಿಲ್ಲ. ತಡವಾಗಿರುವ ಕಾರಣಕ್ಕಾಗಿ ಅನೇಕ ಜನ ರೋಗಿಗಳು ಅನಾಹುತಕ್ಕೆ ಒಳಗಾಗಿದ್ದಾರೆ ಎಂದು ಹೇಳಿದ್ದಾರೆ. ಸಚಿವಸಂಪುಟಕ್ಕೆ ಕಳಿಸಿ ತೀರ್ಮಾನ ಮಾಡುವುದರಲ್ಲಿ ಕೆಲಸ ಮುಗಿದುಹೋಗಿರುತ್ತದೆ. ಏಕೆಂದರೆ ಒಪ್ಪಂದದ ಮೇಲೆ ವೈದ್ಯರನ್ನು

ಜಿಲ್ಲಾಧಿಕಾರಿಗಳು ನೇಮಕ ಮಾಡಬಹುದು ಎಂದು ಇಷ್ಟು ದಿವಸ ನಡೆದಿದೆ. ನಿನ್ನೆ ನಾನು ಶಿವಮೊಗ್ಗಕ್ಕೆ ಹೋಗಿ ನೋಡಿದರೆ, ಸೆಲೆಕ್ಟ್ ಮಾಡಿ ಕಳಿಸಿದರೂ ಅದು ನಿಮ್ಮ ಇಲಾಖೆಯಲ್ಲಿ ಹಾಗೆಯೇ ಬಿದ್ದು ಸತ್ತಿದೆ. ಜನ ಸತ್ತಮೇಲೆ ಕಳಿಸುತ್ತೀರೇನು? ಇವತ್ತು ಇಲ್ಲಿಂದ ಯಾರನ್ನಾದರೂ ಕಳುಹಿಸಿ ನೀವು ಸಚಿವ ಸಂಪುಟದಲ್ಲಿ ಇಟ್ಟು ತೀರ್ಮಾನ ಮಾಡಿ ನೇಮಕ ಮಾಡಿ ಕಳಿಸುವುದರೊಳಗೆ ಜನ ಸಾಯುತ್ತಾರೆ. ಎಲ್ಲೆಲ್ಲಿ ಅಗತ್ಯ ಇದೆ, ಅಲ್ಲಿ ಪಕ್ಕದಲ್ಲಿಯಾದರೂ ತರಿಸಿಕೊಂಡು ಡಿಪ್ಲಾಯ್ ಮಾಡಿರಿ. ಆಗತ್ಯ ಬಿದ್ದರೆ send all your people there.

ಶ್ರೀ ಸಿದ್ದರಾಮಯ್ಯ :- ಮಾಡುತ್ತಿದ್ದೇವೆ.

ಡಾ: ಹೆಚ್.ಸಿ.ಮಹದೇವಪ್ಪ :- ಮಾನ್ಯ ಸಭಾಧ್ಯಕ್ಷರೇ, ಈ ಒಂದು ವಿಚಾರ ಅಂದರೆ ಖಾಲಿ ಹುದ್ದೆಗಳು ಇರುವಂಥಾದ್ದು ನಿನ್ನೆಮೊನ್ನೆಯದಲ್ಲ. ಕಳೆದ ಹತ್ತು ವರ್ಷಗಳಿಂದಲೂ ಕೂಡ ಇದು ನಡೆದುಕೊಂಡು ಬರುತ್ತಿದೆ. ನಮ್ಮ ಸರ್ಕಾರ ಬಂದಮೇಲೆ ನಾವು ತೀವ್ರವಾಗಿ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅಗತ್ಯವಿರುವ ಸಿಬ್ಬಂದಿ ಒದಗಿಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಮಾನ್ಯ ಸದಸ್ಯರ ಏನು ಆತಂಕ ಇದೆ, ಅಲ್ಲಿ ಒಬ್ಬರೇ ಟೆಕ್ನೀಶಿಯನ್ ಇದ್ದಾರೆ ಎಂದು ಹೇಳಿದ್ದಾರೆ. ಕಳೆದ ಒಂದು ವಾರದ ಕೆಳಗೆ ಕೇಂದ್ರಸರ್ಕಾರದ ಜಂಟಿ ನಿರ್ದೇಶಕರು, ನಮ್ಮ ರಾಜ್ಯದ ಡೆಪ್ಯುಟಿ ಡೈರೆಕ್ಟರ್, ರೀಜನಲ್ ಡೈರೆಕ್ಟರ್‌ನ್ನು ಮಂಗಳೂರಿಗೆ ಕಳಿಸಿ ಅಲ್ಲಿ ಸಮಗ್ರವಾದ ವರದಿಯನ್ನು ತರಿಸಿ ಅಲ್ಲಿ ಎಷ್ಟು ಮಲೇರಿಯಾ ಪೀಡಿತರ ಸಂಖ್ಯೆ ಇದೆ, ಖಾಸಗಿ ನರ್ಸಿಂಗ್ ಹೋಮ್‌ಗಳಲ್ಲಿ ಯಾರು ಶುಶ್ರೂಷೆ ಪಡೆದಿದ್ದಾರೆ,...

ಡಾ॥ ಯು. ಚಿತ್ತರಂಜನ್:- ನಿಮ್ಮ ವರದಿ ಬರುವುದರೊಳಗೆ ಅಲ್ಲಿ ಮತ್ತೊಂದು ಐವತ್ತು ಹೆಣಗಳು ಬೀಳುತ್ತವೆ. ನಾನು ಇಷ್ಟು ಗಂಭೀರವಾಗಿ ಹೇಳುತ್ತಿದ್ದೇನೆ. ನೀವು ವರದಿಯನ್ನು ತರಿಸುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ.

ವೈಸ್ ಚೇರ್ಮನ್:- ಅವರು ಉತ್ತರ ಪೂರ್ತಿ ಕೊಟ್ಟುಬಿಡಲಿ. ನಂತರ ನೀವು ಕ್ಲಾರಿಫಿಕೇಶನ್ ಕೇಳಿ.

ಡಾ॥ ಹೆಚ್.ಸಿ.ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ನಾನು ಈಗ ಹೇಳಿದ್ದೇನೆ ಏನೆಂದರೆ, ನಾವು ಔಷಧಿ ಎಷ್ಟು ಬೇಕಾದರೂ ಕೊಡುವುದಕ್ಕೆ ಸರ್ಕಾರ ಸಿದ್ಧ ಇದೆ. ಔಷಧಿಯನ್ನು ನಾವು ಕಳಿಸಿದ್ದೇವೆ. ಮೂರೂವರೆ ಲಕ್ಷ ಕ್ಲೋರೋಫಿನ್ ಗುಳಿಗೆಗಳು, 25 ಸಾವಿರ ಫಿನಾಫಿನ್ ಕೊಟ್ಟಿದ್ದೇವೆ. ಔಷಧಿ ಎಷ್ಟು ಬೇಕಾದರೂ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಇದನ್ನು ಅರ್ಥಮಾಡಿಕೊಳ್ಳದಿದ್ದರೆ ಹೇಗೆ ಉತ್ತರ ಕೊಡುವುದು? ಮಾನ್ಯ ಅಧ್ಯಕ್ಷರೆ, ತಮಗೆ ನಾನು ಈ ಸದನದ ಮೂಲಕ ಆಶ್ವಾಸನೆಯನ್ನು ಕೊಡುತ್ತೇನೆ. ನಾಲ್ಕುನೂರು ಜನ ಅಲ್ಲಿ ಮುನಿಸಿಪಾಲಿಟಿಯಲ್ಲಿ ಕಸ ಗುಡಿಸುವವರು ಇಲ್ಲವೆಂದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ? ನಾನು ಹೇಳಿದ್ದೇನೆ, ವಿವಿಧ ಇಲಾಖೆಗಳ, ಉನ್ನತ ಅಧಿಕಾರಿಗಳ ಸಭೆಯನ್ನು ನಡೆಸಿ ನಾನು ಅವರಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಆರೋಗ್ಯ ತಪಾಸಣೆ ಮಾಡತಕ್ಕದ್ದು ಮತ್ತು ಜನರ ಆರೋಗ್ಯ ಸಂರಕ್ಷಣೆ ಮಾಡತಕ್ಕಂಥ ವಿಚಾರದಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಅವರಿಗೆ ಸೂಚಿಸಿದ್ದೇನೆ. ಮತ್ತು ಗ್ರಾಮೀಣ ನೈರ್ಮಲ್ಯ, ನಗರ ನೈರ್ಮಲ್ಯೀಕರಣ ಕೆಲಸ

ಏನು ಇದೆ, ಇದು ಒಂಭತ್ತು ತಿಂಗಳುಗಳಿಂದ ಬಂದಿಲ್ಲ. ಕಳೆದ ನಲ್ವತ್ತು ವರ್ಷಗಳಿಂದ ಇಂತಹ ವ್ಯವಸ್ಥೆ ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಇರುವುದರಿಂದ ರಾತ್ರೋರಾತ್ರಿ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ತೀವ್ರವಾಗಿ ರೋಗರುಜಿನಗಳಿಂದ ನರಳತಕ್ಕ ಜನರ ಸಂರಕ್ಷಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಇನ್ನು ಒಂದು ವಾರ ಅಥವಾ ಹತ್ತು ದಿವಸಗಳಲ್ಲಿ ನಮ್ಮ ನಿರ್ದೇಶಕರನ್ನು....

ಡಾ॥ ಹೆಚ್.ಸಿ.ಮಹದೇವಪ್ಪ:- ನಾನು ಹೇಳುತ್ತಿರುವುದು ಮಲೇರಿಯಾ ಬಗ್ಗೆ. ಈಗಾಗಲೇ ಇಬ್ಬರು ಟೆಕ್ನಿಶಿಯನ್ಸ್‌ನ್ನು ಕಳಿಸಿದ್ದೇವೆ. ಔಷಧಿಗಳನ್ನು ಕೊಡುತ್ತಿದ್ದೇವೆ. ಎಷ್ಟು ಬೇಕಾದರೂ ಕೊಡುತ್ತಿದ್ದೇವೆ. ಖಾಲಿ ಇರತಕ್ಕಂಥ ಸಿಬ್ಬಂದಿಯನ್ನು ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ರಾಷ್ಟ್ರೀಯ ಫೈಲೇರಿಯಾ, ಅದು ಕೂಡ ಸೊಳ್ಳೆಗಳನ್ನು ಕಂಟ್ರೋಲ್ ಮಾಡತಕ್ಕದ್ದು. ಈಗ ಈ ಒಂದು ಆಯೋಗ ಅಲ್ಲಿ ಕೆಲಸ ಮಾಡುತ್ತಿದೆ. ಮತ್ತೊಂದು ಮಲೇರಿಯಾ ಕಂಟ್ರೋಲ್ ಮಾಡುವುದಕ್ಕೆ ಯೂನಿಟ್ ಅನ್ನು ಮಂಗಳೂರು ನಗರದಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲ. ರಾಷ್ಟ್ರೀಯ ಫೈಲೇರಿಯಾ ಕಂಟ್ರೋಲ್ ಪ್ರೋಗ್ರಾಂ ಅಲ್ಲಿ ಕೆಲಸ ಮಾಡುತ್ತಿರುವುದರಿಂದ, ರಾಷ್ಟ್ರ, ರಾಜ್ಯಮಟ್ಟದ ತಂಡ ಅಲ್ಲಿ ಹೋಗಿದೆ. ಜಿಲ್ಲಾಧಿಕಾರಿಗಳು ಉತ್ತಮ ಕೆಲಸವನ್ನು ಅಲ್ಲಿ ಮಾಡುತ್ತಿದ್ದಾರೆ. ಸರ್ಕಾರ ಪ್ರಾಮಾಣಿಕವಾಗಿ ಈ ರೋಗದ ನಿಯಂತ್ರಣವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆ ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎನ್.ರಾಜಣ್ಣ :- ಸೊಳ್ಳೆ ನಿಯಂತ್ರಣ....

ವೈಸ್‌ಚೇರ್ಮನ್:- ಒಂದು ನಿಮಿಷ ಇರಿ. ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ.ರುಕ್ಮಯ್ಯ ಪೂಜಾರಿ :- ಮಲೇರಿಯಾ ರೋಗ ಎನ್ನುವುದು ಮರಣಾಂತಿಕವಾದ ರೋಗ ಅಲ್ಲ. ನಿಮ್ಮ ಕೇರ್‌ಲೆಸ್‌ನಿಂದಾಗಿ ಜನ ಮೃತಪಟ್ಟಿದ್ದಾರೆ. ಆದ್ದರಿಂದ ಸರ್ಕಾರದ ವತಿಯಿಂದ ಏನಾದರೂ ಪರಿಹಾರ ಕೊಡುತ್ತೀರಾ? ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ,

ಶ್ರೀ ಎನ್.ರಾಜಣ್ಣ :- ಮಾನ್ಯ ಆರೋಗ್ಯ ಮಂತ್ರಿಗಳು ಈಗತಾನೆ ಹೇಳಿದರು, ಇದಕ್ಕಾಗಿ 9 ಕೋಟಿಯಿಂದ 15 ಕೋಟಿವರೆಗೆ ಖರ್ಚು ಮಾಡುತ್ತಿದ್ದೇವೆ ಎಂದು. Sir, I want a clarification. I want to know what is the total amount you are spending on the purchase of pesticides? Whether so purchased pesticides erdaicate mosquitoes? Whether they act on mosquitoes? ಮಸ್ಕಿಟೋಸ್ ಎರಾಡಿಕೇಟ್ ಆಗಿದೆಯೆಂದರೆ ಇತ್ತೀಚಿನ ದಿವಸಗಳಲ್ಲಿ ಮಲೇರಿಯಾ ರೋಗ ಏಕೆ ಜಾಸ್ತಿ ಆಗುತ್ತಿತ್ತು? That goes to show that pesticides now-a-days do not work on mosquitoes when sprayed. ಈ ಪೆಸ್ಟಿಸೈಡ್ಸ್ ಉಪಯೋಗಮಾಡುವಾಗ ಮಸ್ಕಿಟೋಗಳು ಬಹಳ ಆನಂದವಾಗಿರುತ್ತವಂತೆ. ಸಂತೋಷವಾಗಿ ಸ್ವಿಮ್ ಮಾಡುವುದಕ್ಕೆ ಅವುಗಳು ಬಹಳ ಆನಂದವಾಗಿರುತ್ತವಂತೆ. ಈ ತರಹ ಪೆಸ್ಟಿಸೈಡ್ಸ್‌ನ್ನು ಉಪಯೋಗ ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ. I request the Hon'ble Minister for health to see that

instructions are given to purchase good quality pesticides to eradicate mosquitoes.

ವೈಸ್ ಚೇರ್ಮನ್:- ಇರಿ, ಸುರೇಶ್‌ಕುಮಾರ್ ಏನೋ ಹೇಳಬೇಕೆಂದು ಇದ್ದಾರೆ.

Sri N.Rajanna:- They have to use MLO to kill larva of mosquitoes.

ಶ್ರೀ ಎನ್.ಯೋಗೀಶ್ ಭಟ್:- ಫೈಲೇರಿಯಾ ಸೊಳ್ಳೆಗಳು ಕೊಳಚೆ ನೀರಿನಲ್ಲಿ ಬೆಳೆಯುವಂಥಾದ್ದು. ಆದರೆ ಮಲೇರಿಯಾ ಸೊಳ್ಳೆಗಳು ಸಿಹಿ ನೀರಿನಲ್ಲಿ ಬೆಳೆಯುತ್ತವೆ. ಇದನ್ನು ಗಮನಿಸಬೇಕು ಮಂಗಳೂರಿನಲ್ಲಿ ಫೈಲೇರಿಯಾ ಕಂಟ್ರೋಲ್ ಯೂನಿಟ್ ಇದ್ದಾಕ್ಷಣ ಮಲೇರಿಯವನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅಲ್ಲಿ ಮಲೇರಿಯಾ ಕಂಟ್ರೋಲ್ ಯೂನಿಟ್ ಸ್ಯಾಂಕ್ಷನ್ ಮಾಡುವುದರ ಬಗ್ಗೆ ಏನು ಯೋಚನೆ ಮಾಡಿದ್ದೀರಿ? ದಯವಿಟ್ಟು ಅದನ್ನು ಹೇಳಿ. ದಯವಿಟ್ಟು ಅಲ್ಲಿ ಫೊಲ್ಲೆರೊಸೆಂಟ್ ಟ್ಯೂಬ್ಸ್ ಮತ್ತು ಸೂಕ್ಷ್ಮದರ್ಶಕ ಯಂತ್ರಗಳನ್ನು ಒದಗಿಸಿ ಎರಡು-ಮೂರು ನಿಮಿಷಗಳಲ್ಲಿ ರೋಗ ಪತ್ತೆ ಹಚ್ಚುವಂಥ ವ್ಯವಸ್ಥೆ ಮಾಡಬೇಕು. ಅಂತಹ ತಂತ್ರಜ್ಞರನ್ನು ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಸದಸ್ಯರಾದ ಡಾ:ಚಿತ್ತರಂಜನ್ ಅವರು ಪ್ರಸ್ತಾಪ ಮಾಡಿರತಕ್ಕಂಥ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಸನ್ಮಾನ್ಯ ಆರೋಗ್ಯ ಮಂತ್ರಿಗಳು ಈ ವಿಚಾರದಲ್ಲಿ ಸಂಪೂರ್ಣವಾಗಿ ರೋಗವನ್ನು ಹತೋಟಿಯಲ್ಲಿ ತರುತ್ತೇವೆ ಎಂದು ಭರವಸೆಯನ್ನು ಈ ಸದನಕ್ಕೆ ಕೊಟ್ಟರೆ ಪ್ರಾಯಶಃ ಅದನ್ನು ಸದನದ ಸದಸ್ಯರು ಒಪ್ಪುವುದಿಲ್ಲ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಮಂಗಳೂರಿನಂಥ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ನಾಲ್ಕುನೂರುಜನ ಕಾರ್ಮಿಕರ ಹುದ್ದೆಗಳು ಖಾಲಿ ಇರುವ ಸಂದರ್ಭದಲ್ಲಿ ಕೊಳಚೆ ಪ್ರದೇಶಗಳು ಇರತಕ್ಕಂಥ ಜಾಗದಲ್ಲಿ ಇದು ಗುಡಿಸುವುದರಿಂದಾಗಲೀ, ನೈರ್ಮಲ್ಯೀಕರಣ ಮಾಡುವುದರಿಂದಾಗಲೀ, ಈ ಶಕ್ತಿ ನಮ್ಮ ಕಾರ್ಪೊರೇಷನ್‌ನಲ್ಲಿ ಇಲ್ಲದಿದ್ದಾಗ ಈ ರೋಗಗಳನ್ನು ನಿವಾರಣೆ ಮಾಡುವುದಕ್ಕೆ ಹೇಗಾಗುತ್ತದೆ ಎಂದು ಮಾನ್ಯಮಂತ್ರಿಗಳು ಹೇಳಬೇಕಾಗುತ್ತದೆ. ಈ ಸಮಸ್ಯೆ ಕೇವಲ ಮಂಗಳೂರು ನಗರಪಾಲಿಕೆಯದ್ದು ಒಂದೇ ಅಲ್ಲ. ಅವರ ಹೇಳಿಕೆ ಪ್ರಕಾರ ಆರು ಜಿಲ್ಲೆಗಳಲ್ಲಿ ಈ ಒಂದು ಖಾಹಿಲೆ ಪ್ರಾರಂಭವಾಗಿರುವಂಥಾದ್ದು ಪರಿಸ್ಥಿತಿ ಇರುವಾಗ ಇದು ಹೆಚ್ಚು ಹರಡದಂತೆ ನೋಡಿಕೊಳ್ಳುವ ಜವಾಬ್ದಾರಿ ಕೇವಲ ಆರೋಗ್ಯ ಇಲಾಖೆಯದು ಒಂದೇ ಅಲ್ಲ. ಇದಕ್ಕೆ ನಗರಾಭಿವೃದ್ಧಿ ಸಚಿವರ ಕರ್ತವ್ಯವೂ ಇದೆ. ತುರ್ತಾಗಿ ಇವತ್ತು ವೈದ್ಯರ ಕೊರತೆ ಇದೆ ಅಥವಾ ತಂತ್ರಜ್ಞರ ಕೊರತೆ ಇದೆಯೆಂದು ಹೇಳುವ ಒಂದು ವಿಚಾರಕ್ಕೆ ಈ ರೋಗವನ್ನು ತಡೆಯುವುದಕ್ಕೆ ಸಾಧ್ಯವಾಗುವುದಿಲ್ಲ.

1.20 ಪಿ.ಎಂ.

ಆದುದರಿಂದ ನಗರಾಭಿವೃದ್ಧಿ ಸಚಿವರೂ ಸಹ ದಿನಗೂಲಿ ಆಧಾರದ ಮೇಲೆಯೇ ಆಗಲೀ ನಗರ ಸಭೆ, ನಗರಪಾಲಿಕೆಯಲ್ಲಿ ನೈರ್ಮಲ್ಯವನ್ನು ಕಾಪಾಡುವುದರ ಬಗ್ಗೆ ತುರ್ತು ಕ್ರಮ ಸಹ ಜರುಗಿಸಬೇಕಾಗುತ್ತದೆ. ಗುತ್ತಿಗೆ ಆಧಾರದ ಮೇಲೆ ತೆಗೆದಕೊಳ್ಳುವುದಾಗಲೀ ತೆಗೆದುಕೊಂಡು, ಚರಂಡಿ ಗುಡಿಸತಕ್ಕ ವ್ಯವಸ್ಥೆಯಾಗಲೀ, ಒಳಚರಂಡಿ ಸರಿಪಡಿಸುವ ವ್ಯವಸ್ಥೆಯಾಗಲೀ ಅವರೂ

ಸಹ ಮುಂಜಾಗ್ರತೆ ಕ್ರಮ ಕೈಗೊಂಡಾಗ ಮಾತ್ರ ಇದನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಆರೋಗ್ಯಮಂತ್ರಿಗಳು ಮಲೇರಿಯ ಬಗ್ಗೆ ನಮ್ಮ ಜಿಲ್ಲೆಯನ್ನು ಬಿಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಮಲೇರಿಯಾ ಇದೆಯೆಂದು ಅವರಿಗೆ ಗೊತ್ತಿಲ್ಲ. ಬರೀ 6 ಜಿಲ್ಲೆಗಳು ಮಾತ್ರ ಹೇಳಿದ್ದಾರೆ. ಮಲೇರಿಯಾ ಜಾಸ್ತಿ ಇರತಕ್ಕಂಥದ್ದು ನಮ್ಮ ಜಿಲ್ಲೆಯಲ್ಲಿ ಎರಡನೆಯದು, ಮಲೇರಿಯಾ ನಿಯಂತ್ರಣ ಮಾಡುವುದಕ್ಕೆ ಸರ್ಕಾರದವರು ಕೊಡುತ್ತಿರತಕ್ಕ ಔಷಧಿಗಳೇನಿವೆ, ಅವು ಸಂಪೂರ್ಣವಾಗಿ ನಿರುಪಯುಕ್ತ. ಅವುಗಳಿಂದ ಯಾವುದೇ ಪರಿಣಾಮ ಇಲ್ಲ. ಅಂತಹ ಔಷಧಿಗಳನ್ನು ಕೊಡುತ್ತಿದ್ದಾರೆ. ಡಾಕ್ಟರುಗಳು ಏನು ಮಾಡುತ್ತಿದ್ದಾರೆ. ಮಲೇರಿಯಾ ಏಕೆ ಬಂದಿದೆ, ಆ ಪ್ರಶ್ನೆ ಬೇರೆ. ಇದು ಬೇರೆ ಇಲಾಖೆಗೆ ಸಂಬಂಧಪಡುವುದಿಲ್ಲ.

(ಸಭಾಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್‌ರವರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಡಾಕ್ಟರುಗಳ ಹತ್ತಿರ ಸರಿಯಾದ ಔಷಧಿ ಇಲ್ಲ. ಈ ಔಷಧಿ ಕೊಟ್ಟಾಗ ಎರಡು ದಿವಸ ನಿಂತಹೋಗುತ್ತದೆ ಮತ್ತೆ ಒಂದು ವಾರಕ್ಕೆ ಷುರುವಾಗುತ್ತದೆ. ಅಂತಹ ಔಷಧಿಗಳನ್ನು ಕೊಡುತ್ತಿದ್ದಾರೆ. ಇವರೆಲ್ಲಿ ಔಷಧಿಗಳನ್ನು ಖರೀದಿ ಮಾಡುತ್ತಿದ್ದಾರೆ, ಯಾರ ಹತ್ತಿರ ಖರೀದಿ ಮಾಡುತ್ತಿದ್ದಾರೆ ಎನ್ನತಕ್ಕಂಥಾದ್ದು ಒಂದು ಪ್ರಶ್ನೆ. ಮತ್ತು ನನಗೆ ಗೊತ್ತಿರತಕ್ಕ ಮಾಹಿತಿ ಪ್ರಕಾರ...

ಅಧ್ಯಕ್ಷರು:- ಈ ಗಮನ ಸೆಳೆಯುವ ಸೂಚನೆಯನ್ನು ಕ್ಲೋಸ್ ಮಾಡಿದ್ದೇನೆ. ಮುಂದಿನ ಗಮನ ಸೆಳೆಯುವ ಸೂಚನೆ, ಮಾನ್ಯ ಕೃಷ್ಣಪ್ಪನವರೇ ತಾವು ಗಮನ ಸೆಳೆಯಿರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಇಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಮುಂದಿನ ಸಾಲಿನ ಸದಸ್ಯರು ಮಾತನಾಡುವಾಗ ನಾವು ಇದೇರೀತಿ ಗಲಾಟೆ ಮಾಡತ್ತೇವೆಯೇ? ತಾವು ಹಿರಿಯ ಸದಸ್ಯರು ಎಂದು ಗೌರವ ಕೊಡುತ್ತೇವೆ. ನಿಮಗೆ ಮಾತ್ರ ಪ್ರತಿಯೊಂದರಲ್ಲೂ ಫ್ರೀಡಂ, ಅದನ್ನು ಬೇರೆಯವರಿಗೆ ಕೊಡುವುದಿಲ್ಲವೇ. ನಮಗೂ ಗೌರವ ಕೊಡಬೇಕು. ಇಲ್ಲದೇಹೋದರೆ, ನಾವು ಕುಳಿತುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ನಾನು ಪದೇಪದೇ ಎಲ್ಲರಲ್ಲೂ ವಿನಂತಿ ಮಾಡಿಕೊಳ್ಳತ್ತಿದ್ದೇನೆ. ಗಮನ ಸೆಳೆಯುವ ಸೂಚನೆ ಎಂದು ಹೇಳಿದರೆ, ಯಾರು ಸಹಿ ಮಾಡಿರುತ್ತಾರೆ, ಅವರು ಮಾತ್ರ ವಿವರಣೆಯನ್ನು ಕೇಳತಕ್ಕ ಅವಕಾಶವನ್ನು ಪಡೆದಿರುತ್ತಾರೆ. ಗಮನ ಸೆಳೆಯುವ ಸೂಚನೆ ಮೇಲೆ ಮೂರು ಜನರಿಗಿಂತ ಹೆಚ್ಚು ಜನರಿಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಇದು ಬಹಳ ಗಂಭೀರವಾದ ವಿಷಯವೆಂದು ಹೇಳಿ, ನಿಯಮವನ್ನು ಸಡಿಲಗೊಳಿಸಿ, ಆ ಜಿಲ್ಲೆಯವರಿಗೆ 5-6 ಜನರಿಗೆ, ಯಾರು ಯಾರು ಸಹಿ ಹಾಕಿದ್ದಾರೆ ಅವರನ್ನೊಳಗೊಂಡಂತೆ ಅವಕಾಶ ಕೊಟ್ಟೆ. ಆದರೆ, ನಾನು ಒಳಗಡೆ ಹೋಗಿಬರುವ ಹೊತ್ತಿಗೆ, ಇವನ್ನೇ ಡಿಬೇಟ್ ಮಾಡುತ್ತಿದ್ದೀರಿ. ನೀವೂ ಕೂಡ ಪ್ರತ್ಯೇಕವಾದ ಗಮನ ಸೆಳೆಯುವ ಸೂಚನೆ ಕಳುಹಿಸಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ನಮ್ಮ ಜಿಲ್ಲೆಯನ್ನು ಬಿಟ್ಟು, ಆರು ಜಿಲ್ಲೆ ಮಾತ್ರ ಲೆಕ್ಕ ಕೊಟ್ಟಿದ್ದಾರೆ. ಈಗ ಅವಕಾಶ ಬಂತು, ಅದಕ್ಕಾಗಿ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು:- ಆ ರೀತಿ ಆಗುವುದಿಲ್ಲ. ಎಲ್ಲಾ ವಿಷಯಕ್ಕೆ, ಎಲ್ಲರೂ ಎದ್ದುನಿಂತರೆ ನಾವು ರೂಲ್ಸ್ ಪುಸ್ತಕ ಬಿಸಾಕಿ ಕೆಲಸ ಮಾಡಬೇಕಾಗುತ್ತದೆ. ಆ ರೀತಿ ಮಾಡುವುದಕ್ಕಾಗುವುದಿಲ್ಲ. ದಯಮಾಡಿ, ಇದನ್ನು ಕ್ಲೋಸ್ ಮಾಡಿದ್ದೇನೆ. ತಾವೆಲ್ಲರೂ ನನಗೆ ಸಹಕಾರ ಕೊಡಬೇಕು.

ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಂಡು, ಇದನ್ನು ಕ್ಲೋಸ್ ಮಾಡಿದ್ದೇನೆ. ಈಗ ಮಾನ್ಯ ಕೃಷ್ಣಪ್ಪನವರು, ತಮ್ಮ ಗಮನ ಸೆಳೆಯುವ ಸೂಚನೆಯನ್ನು ರೈಸ್ ಮಾಡಿ.

ಶ್ರೀ ಬಿ.ರಮಾನಾಥ ರೈ:- ಈಗಾಗಲೇ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಮಂತ್ರಿಗಳು ಇನ್ನೂ ಉತ್ತರ ಕೊಡಲಿಲ್ಲ. ಅವರು ಉತ್ತರ ಕೊಡುವ ತನಕದಲ್ಲಿದ್ದಾರೆ.

ಅಧ್ಯಕ್ಷರು:- ಪ್ರತಿಯೊಬ್ಬರೂ ಕೂಡ ಭಾಷಣ ಮಾಡಿಕೊಂಡು ಹೋಗುತ್ತಿದ್ದರೆ ಆಗುತ್ತದೆಯೇ? ನೀವು ಬರೀ ಭಾಷಣ ಮಾಡುತ್ತಿದ್ದೀರಿ, ವಿವರಣೆ ಕೇಳಿದ್ದೀರಾ? ಅದು ವಿವರಣೆ ಕೇಳುವ ವಿಧಾನವೇ? ದಯಮಾಡಿ, ಎಲ್ಲರೂ ನಾಳೆಯಿಂದ ರೂಲ್ಸ್ ಪುಸ್ತಕವನ್ನು ತೆಗೆದುಕೊಂಡು ಒಂದು ಗಂಟೆ ಕಾಲ ಅಭ್ಯಾಸ ಮಾಡಿಕೊಂಡು ಬನ್ನಿ. ಸದನ ನಡೆಸುವುದು ಸುಲಭ ಆಗುತ್ತದೆ. ಇಲ್ಲದೇ ಹೋದರೆ ಇದು ಬಜಾರ್ ಆಗುತ್ತದೆ, ಸದನ ಆಗುವುದಿಲ್ಲ.

(2) ಕೊಳ್ಳೆಗಾಲ ತಾಲ್ಲೂಕು ಕುಂತೂರು ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯು ಮುಚ್ಚಿರುವುದರಿಂದ, ಕಬ್ಬು ಬೆಳೆಗಾರರಿಗೆ ಉಂಟಾಗಿರುವ ತೊಂದರೆ.

ಶ್ರೀ ಎಸ್.ಕೃಷ್ಣಪ್ಪ (ಬನ್ನೂರು):- ಮಾನ್ಯ ಅಧ್ಯಕ್ಷರೇ, ಕೊಳ್ಳೆಗಾಲ ತಾಲ್ಲೂಕು, ಕುಂತೂರು ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯನ್ನು ಇನ್ನೂ ಪ್ರಾರಂಭ ಮಾಡದೇ ಇರುವ ಪ್ರಯುಕ್ತ ಆ ಭಾಗದ ರೈತರಿಗೆ ಬಹಳ ಅನಾನುಕೂಲವಾಗಿ ತೊಂದರೆಯಲ್ಲಿದ್ದಾರೆ. ಅವರ ಬಗ್ಗೆ ನಾನು ಪರಿಪೂರ್ಣವಾದ ಮಾಹಿತಿಯನ್ನು ಮತ್ತು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಇಲ್ಲಿಯವರೆಗೆ ಆಗಿರತಕ್ಕ ತೊಂದರೆಯನ್ನು ತಮ್ಮ ಮುಂದೆ ನಿವೇದನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ದಯಮಾಡಿ ಸಕ್ಕರೆ ಮಂತ್ರಿಗಳು ಮೊಟ್ಟಮೊದಲು ನಮಗೆ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ.ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ, ತಂತ್ರಜ್ಞಾನ ಪರಿಸರ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯ ದಿನವಹಿ ಕಬ್ಬು ಸುರಿಸುವ ಸಾಮರ್ಥ್ಯ 2500ಮೆ.ಟನ್‌ಗಳಾಗಿರುತ್ತದೆ. 1994-95ನೇ ಹಂಗಾಮಿನಲ್ಲಿ ಕಾರ್ಖಾನೆಯು 4,02,415 ಮೆ.ಟನ್ ಕಬ್ಬನ್ನು ಸುರಿಸಿ 33,968 ಮೆ.ಟನ್ ಸಕ್ಕರೆಯನ್ನು ಉತ್ಪಾದಿಸಿರುತ್ತದೆ. ಕಾರ್ಖಾನೆಯು ಸದರಿ ಹಂಗಾಮನ್ನು ದಿನಾಂಕ 10-06-1994 ರಂದು ಪ್ರಾರಂಭಿಸಿ ದಿನಾಂಕ 10-04-1995 ಕ್ಕೆ ನಿಲ್ಲಿಸಿರುತ್ತದೆ. ಸದರಿ ಹಂಗಾಮಿನಲ್ಲಿ ಕಾರ್ಖಾನೆಗೆ ಸರಬರಾಜು ಮಾಡಿದ ಕಬ್ಬಿಗೆ ಟನ್ ಒಂದಕ್ಕೆ ರೂ. 675-00 [illegible] ಪಾವತಿಸಿರುತ್ತದೆ.

1995-96ನೇ ಸಾಲಿಗೆ ಸಂಬಂಧಿಸಿದಂತೆ ಕಾರ್ಖಾನೆಯು ಇದನ್ನು ಕಾರ್ಯಾರಂಭ ಮಾಡಿರುವುದಿಲ್ಲ. [illegible] ಅಂತ್ಯದ ವೇಳೆಗೆ ಪ್ರಾರಂಭಿಸುವುದಾಗಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸದರಿ ಕಾರ್ಖಾನೆಯ ವ್ಯವಸ್ಥಾಪಕರು ಈ ಹಿಂದೆ ಮಾಹಿತಿ ನೀಡಿದ್ದರು. ಆದರೆ ಅದರಂತೆ ಕಾರ್ಯಾರಂಭ ಮಾಡಿರುವುದಿಲ್ಲ. 1995-96ನೇ ಸಾಲಿಗೆ ಕಬ್ಬಿನ ಬೆಳೆ ಪಾವತಿಸುವ ಬಗ್ಗೆ ರೈತರು ಹಾಗೂ ಕಾರ್ಖಾನೆಯ ವ್ಯವಸ್ಥಾಪಕರ ನಡುವೆ ಒಡಂಬಡಿಕೆ ಆಗದಿರುವ ಕಾರಣ ಕಾರ್ಖಾನೆಯನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ. 1995-96ನೇ ಸಾಲಿಗೆ ದಿನಾಂಕ 16-9-1995ರಿಂದ ಕಾರ್ಯರಂಭ ಮಾಡುವುದಾಗಿ ಕಾರ್ಖಾನೆಯ ವ್ಯವಸ್ಥಾಪಕರು ತಿಳಿಸಿದ್ದಾರೆ.

ಶ್ರೀ ಎಸ್.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೇ, ಈ ಮಹದೇಶ್ವರ ಸಕ್ಕರೆ ಕಾರ್ಖಾನೆ